ಅಚಲ

ತಿಂಗಳ ಪತ್ರಿಕೆ

ಜುಲೈ - 2003

ಒಳಗೇನಿದೆ :

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 18 ಸಂಚಿಕೆ : 7

ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾನಾಗರಾಜ್
ಹೆಚ್. ಎನ್: ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on
behalf of Jagruthi Mahila
Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಕಳೆದ 18 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ

ವಾರ್ಷಿಕ ಚಂದಾ - ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಅಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಡಾ|| ಹೆಚ್. ಎಸ್. ಸುಜಾತಾರವರು ಅಚಲ ಪತ್ರಿಕೆಗೆ ಶುಭಕೋರಿ ಒಂದು ಸಾವಿರ ರೂಗಳ ದೇಣಿಗೆಯನ್ನು ನೀಡಿದ್ದಾರೆ. ಅವರಿಗೆ ಅಚಲದ ವಂದನೆಗಳು

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಆತ್ಮವಿಶ್ವಾಸ ಇಂದಿನ ಅಗತ್ಯ

ದೆಹಲಿಯ ನೋಯ್ಡಾದ ಸಾಫ್ಟ್‌ವೇರ್ ವಿದ್ಯಾರ್ಥಿನಿ, ನಿಶಾ ಶರ್ಮ ಸದ್ಯಕ್ಕೆ ಸುದ್ದಿಯಲ್ಲಿದ್ದು ವರದಕ್ಷಿಣೆಯ ಸಮಸ್ಯೆಯನ್ನು ಎಲ್ಲರಿಗೂ ಜ್ಞಾಪಿಸುತ್ತಾ ಚರ್ಚಿಸುವಂತೆ ಮಾಡಿದಳು. ಎಪ್ಪತ್ತರ ದಶಕದಲ್ಲೂ ವರದಕ್ಷಿಣೆ ಸಮಸ್ಯೆಯ ಮಹಿಳಾ ಚಳುವಳಿಗೆ ಮುಖ್ಯ ವಿಷಯವಾಗುವಂತೆ ಮಾಡಿದವಳು ಅಂದಿನ ಸತ್ಯರಾಣಿ ಚಡ್ಡಾ. ಸಾಕಷ್ಟು ವರದಕ್ಷಿಣೆ ಕೊಡದದ್ದಕ್ಕೆ ಅವಳ ಮಗಳನ್ನು ಹಿಂಸಿಸಿ ಕೊಲೆ ಮಾಡಿದ್ದನ್ನು ಪ್ರತಿಭಟಿಸಿ ಸತ್ಯರಾಣಿ ಹೋರಾಟದ ಬಾವುಟ ಹಿಡಿದಿದ್ದಳು. ಹೀಗೆ ವೈಯಕ್ತಿಕ ಪ್ರತಿಭಟನೆಗಳು ಸಾಮಾಜಿಕ ಬೆಂಬಲ ಮತ್ತು ಸ್ವರೂಪವನ್ನು ಪಡೆದಾಗ ಚಳುವಳಿಗೆ ಕಾರಣಗಳಾಗಬಹುದಾದ್ದರಿಂದ ವ್ಯಕ್ತಿಗತ ಪ್ರತಿಭಟನೆ ವ್ಯರ್ಥವೆನಿಸದಂತೆ ಮಾಡುತ್ತದೆ.

ಇತ್ತೀಚೆಗೆ ದೆಹಲಿಯ ನಿಶಾಳ ಕೃತ್ಯವನ್ನು ಮೆಚ್ಚಿ, ಬಹುಮಾನಿಸಲಾಯಿತು. ಇದು ಮೆಚ್ಚುಗೆಯ ವಿಷಯವಾದರೂ ಇಂದು ನಿಶಾ ಮತ್ತು ಅವಳಂತಹ ಹಲವಾರು ಹುಡುಗಿಯರು ಗಮನಿಸಲೇಬೇಕಾದ ಕಹಿ ವಾಸ್ತವಗಳು ಮರೆಯಾಗಬಾರದು. ನಿಶಾಳನ್ನು ಮದುವೆಯಾಗಲು ಗಂಡಿನ ಮನೆಯವರು ಕೇಳಿದ ಹಣ ಜಾಸ್ತಿಯೆನಿಸಿದಾಗ ಪ್ರತಿಭಟಿಸಿದ ನಿಶಾಳ ನಿರ್ಧಾರವನ್ನು ಅವಳ ಹೆತ್ತವರು ಬೆಂಬಲಿಸಿದರು. ಇಂತಹ ಬೆಂಬಲ ಎಷ್ಟು ಜನ ಹೆಣ್ಣು ಮಕ್ಕಳಿಗೆ ಸಿಗುತ್ತದೆ? ಮತ್ತೊಂದು ಅತಿ ಮುಖ್ಯ ವಿಷಯವೆಂದರೆ ಹುಡುಗನ ವಿದ್ಯಾರ್ಹತೆ ಅನುಮಾನಾಸ್ಪದವಾಗಿತ್ತು ಮತ್ತು ಅವನ ಮನೆಯವರ ಬೇಡಿಕೆಗಳು ನ್ಯಾಯಯುತವಾಗಿರಲಿಲ್ಲ ಎಂಬ ಕಾರಣಗಳು.

ಹೆಣ್ಣಿಗೆ ಮದುವೆಯಾಗಬೇಕೆಂದರೆ ಗಂಡೊಬ್ಬ ಸಿಕ್ಕಿದರೆ ಸಾಕೆನ್ನುವ ಮತ್ತು ಅವನ ಪೂರ್ವಾಪರವನ್ನು ಸರಿಯಾಗಿ ವಿಚಾರಿಸದೆ ಮದುವೆ ಗೊತ್ತು ಮಾಡುವ ಹೆಣ್ಣು ಹೆತ್ತವರ ಪರಿಸ್ಥಿತಿ ಒಂದೆಡೆಯಾದರೆ, ಗಂಡಿನ ಮನೆಯವರ ಬೇಡಿಕೆಗಳನ್ನು ನ್ಯಾಯಯುತ, ಅನ್ಯಾಯಯುತ ಎಂದು ಬೇರ್ಪಡಿಸುವುದಾದರೂ ಹೇಗೆ? ಮದುವೆಯಾದ ಹುಡುಗಿಯರು ಗಂಡನ ಮನೆಗೆ ಹೋಗುವಾಗ ಜೀವನಾವಶ್ಯಕವಾದ ಎಲ್ಲ ವಸ್ತುಗಳನ್ನು ತೆಗೆದುಕೊಂಡು ಹೋಗಬೇಕೆನ್ನುವ ಸಂಪ್ರದಾಯವೇ ಎಷ್ಟು ಹಾಸ್ಯಾಸ್ಪದ? ಈ ನ್ಯಾಯಯುತ ಬೇಡಿಕೆಗಳಲ್ಲಿ ಟಿ.ವಿ., ಫ್ರಿಡ್ಜ್ , ವಾಷಿಂಗ್ ಮೆಷಿನ್, ಫರ್ನಿಚರ್, ಬೀರು ಮತ್ತು ಜೊತೆಗೆ ಮುವತ್ತು, ನಲವತ್ತು ಸೀರೆಗಳು, ಚಿನ್ನಾಭರಣಗಳನ್ನು ಎಲ್ಲವೂ ನ್ಯಾಯಯುತ ಬೇಡಿಕೆಯ ಪಟ್ಟಿಗೆ ಸೇರಬಹುದು ಅಥವಾ ಹೆಣ್ಣಿನ ಮನೆಯವರು 'ವರೋಪಚಾರ'ವೆಂಬ ಹೆಸರಿನಲ್ಲಿ ಕೊಡಲು ಸಿದ್ದರಿರಬಹುದು. ಅಂದರೆ ಈ ಎಲ್ಲ ಕೊಡುಗೆಗಳ ಹಿಂದಿನ ಉದ್ದೇಶ ಅತ್ತೆಯ ಮನೆಯಲ್ಲಿ ವಧುವು 'ಹೊರೆ'ಯಾಗಬಾರದು ಎನ್ನುವುದಾಗಿದೆ. ಆದರೆ ಮದುವೆಯಾಗಿ ಹೋಗುವ ಹೆಣ್ಣು ವಾಸ್ತವದಲ್ಲಿ ಗಂಡನಿಗೆ ಮಾತ್ರವಲ್ಲದೆ ಇಡೀ ಕುಟುಂಬದ ಬೇಕು-ಬೇಡಗಳನ್ನು ಪೂರೈಸುವ ಸೇವೆ ಮಾಡಬೇಕಾಗಿರುತ್ತದೆ. ಮದುವೆಯೆಂಬ ಸಂಸ್ಥೆಯಲ್ಲಿ ಸ್ತ್ರೀ-ಪುರುಷ ಸಮಾನತೆಯ ಅಂಶವೇ ನಾಪತ್ತೆಯಾದಾಗ ವ್ಯಕ್ತಿ ಗೌರವವೂ ಇರುವುದಿಲ್ಲ. ತೂತ್ತಿನ ಸಂಬಂಧದಿಂದ ಹಲವಾರು ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ.

ಹೆಚ್ಚಿದ ವರದಕ್ಷಿಣೆಗಾಗಿ ಮದುವೆಯನ್ನು ಮುರಿದ ನಿಶಾಳ ಪ್ರಕರಣ ಇಂತಹ ಗಂಭೀರ ವಿಷಯಗಳನ್ನು ಕೈಗೆತ್ತಿಕೊಳ್ಳದಿದ್ದರೆ ಮಾಧ್ಯಮದ ಅಬ್ಬರದಲ್ಲಿ ಮುಖ್ಯ ವಿಷಯ ಮರೆತು ಹೋಗಬಹುದು. ಸತ್ಯರಾಣಿ ಆರಂಭಿಸಿದ ಚಳುವಳಿಯಂತೆ ನಿಶಾಳ ಹೋರಾಟವೂ ಮರೆತು ಹೋಗುವ ಮುನ್ನ ಮದುವೆ - ವರದಕ್ಷಿಣೆಯ ಗಂಭೀರ ಸಮಸ್ಯೆಗಳ ಮೂಲ ಕಾರಣಗಳನ್ನು ನಾವು ಶೋಧಿಸಬೇಕಿದೆ.

ನಿಶಾಳ ಪ್ರಕರಣದಲ್ಲಿ ಅವಳು ವಿದ್ಯಾವಂತಳಾಗಿದ್ದುದು ಪ್ರತಿಭಟಿಸುವ ಶಕ್ತಿಯನ್ನು ಕೊಟ್ಟಿರಬಹುದು. ಆದರೆ ಎಲ್ಲ ವಿದ್ಯಾವಂತ ಮಹಿಳೆಯರೂ ಇಂತಹ ಧೈರ್ಯದ ನಿರ್ಧಾರರವನ್ನು ತೆಗೆದುಕೊಳ್ಳದಿರಬಹುದು. ಕೇರಳದಂತಹ ವಿದ್ಯಾವಂತ ಮಹಿಳೆಯರು ಹೆಚ್ಚಿರುವ ರಾಜ್ಯದಲ್ಲೂ ವರದಕ್ಷಿಣೆಯ ಪಿಡುಗು ಇದ್ದೇ ಇದೆ. ಆದರೂ ನಿಶಾಳ ಪ್ರಕರಣ ಮದುವೆಯಾಗಲಿರುವ ಹೆಣ್ಣು ಮಕ್ಕಳಿಗೆ ಧೈರ್ಯತುಂಬಬಹುದು. ಆದರೂ 'ಬೇಡ' ಎನ್ನುವ ಹೆಣ್ಣು ಮಕ್ಕಳ ಆಯ್ಕೆಗೆ ಬೆಂಬಲ ನೀಡಬಲ್ಲ ಹೆತ್ತವರ ನಿರ್ಧಾರವೂ ಅಗತ್ಯಬೇಕಾಗಿದೆ. ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ಕೊಟ್ಟು ಅವರನ್ನು ಸ್ವತಂತ್ರವಾಗಿ ಬದುಕುವಂತೆ ಮಾಡಬೇಕೆನ್ನುವ ನಿರ್ಧಾರವನ್ನು ತಂದೆತಾಯಿಗಳು ತೆಗೆದುಕೊಳ್ಳುವವರೆಗೂ ಈ ಸಮಸ್ಯೆ ಪರಿಹಾರವನ್ನು ಕಾಣಲಾರದು. ಆದರೆ ಇಂತಹ ಬದಲಾವಣೆಯಿಂದ ಹುಡುಗರೂ ವಿದ್ಯಾವಂತ, ಅರ್ಹ ಹೆಣ್ಣುಗಳಿಗಾಗಿ ಕಾಯುವಂತಹ ಪರಿಸ್ಥಿತಿಯೊದಗಿ ಬರುವ ದಿನ ಬರಲೆಂದು ಆಶಿಸೋಣ.

ಸಾಕ್ಷರತೆಯ ಚಳುವಳಿ ಎಷ್ಟೇ ವ್ಯಾಪಕವಾಗಿ ನಡೆದರೂ ಹೆಣ್ಣು ಮನೆಯ ಹೊರಗೆ ದುಡಿಯುವ ಅವಕಾಶ ಪಡೆಯುವಳೇ ಇಲ್ಲವೆ ಎಂಬ ಅಂಶವೇ ಅವಳ ಸ್ವಾಯತ್ತತೆಯನ್ನು ನಿರ್ಧರಿಸುತ್ತದೆ ಮತ್ತು ಆಗ ಅವಳು ಕುಟುಂಬಕ್ಕೆ, ಸಮಾಜಕ್ಕೆ ಹೊರೆಯಾಗುವುದಿಲ್ಲ. ಈ ದಿಕ್ಕಿನಲ್ಲಿ ಮಾಡಲಾಗುವ ಶಾಸನಗಳು ಹೆಣ್ಣಿಗೆ ಬೆಂಬಲ ನೀಡಿ ಸಹಾಯವಾಗಬಹುದೇ ಹೊರತು ಅದೇ ಎಲ್ಲವನ್ನೂ ರೂಪಿಸುವುದಿಲ್ಲ. ಆದ್ದರಿಂದ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವ ಹೆಂಗಸರ ಸಮುದಾಯ ಸೃಷ್ಟಿಯಾಗಬೇಕು. ಹೆಣ್ಣು ಮಕ್ಕಳನ್ನು ಹೊರೆಯೆಂದು ಭಾವಿಸದ ತಂದೆ ತಾಯಿಗಳ ಮನಸ್ಥಿತಿ ಬದಲಾಗಬೇಕು. ಅಂತಹ ಹೊಸಸಂಸ್ಕೃತಿಯಲ್ಲಿ 'ವರದಕ್ಷಿಣೆ' ಮಾಯವಾಗಬಹುದು.

- ಎನ್. ಗಾಯತ್ರಿ

ಭಾರತದಲ್ಲಿ ಶಿಕ್ಷಣ ಮತ್ತು ಮಹಿಳೆ

- ಮಾಲಿನಿ ಭಟ್ಟಾಚಾರ್ಯ

ವಸಾಹತುಶಾಹಿ ಭಾರತದಲ್ಲಿ ಮಹಿಳಾ ಶಿಕ್ಷಣದ ವಿಷಯವು ಅತ್ಯಂತ ಪ್ರಮುಖ ವಿಷಯವಾಗಿದ್ದು ಅಂದಿನ ಊಳಿಗಮಾನ್ಯ ಅಸಮಾನತೆಯ ಲಕ್ಷಣಗಳನ್ನು ಕೊಡವಿಕೊಳ್ಳಲು ಪ್ರಮುಖ ಅಸ್ತ್ರವಾಯಿತು. ಅಂದಿನ ಸಮಾಜ ಸುಧಾರಕರು ಮತ್ತು ಸ್ವಾತಂತ್ರ್ಯ ಹೋರಾಟದ ನಾಯಕರು ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟರು. ಇದರಿಂದಾಗಿ ಮಹಿಳೆಯರಿಗೆ ಶಿಕ್ಷಣದ ಅವಕಾಶಗಳು ತೆರೆದುಕೊಂಡು ಅವರಿಗೆ ಧ್ವನಿಯೆತ್ತಲು ಪ್ರೋತ್ಸಾಹ ನೀಡಿದವು. ಆದರಿಂದ ಅವರು ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಭಾಗವಹಿಸಲು ಸಾಧ್ಯವಾಯಿತು.

ರಾಜಕೀಯ ಭಾಗವಹಿಸುವಿಕೆ ಮತ್ತು ಶಿಕ್ಷಣಕ್ಕೆ ನೇರವಾದ ಸಂಪರ್ಕವಿದೆಯೆಂದು ಹೇಳಲಾಗುವುದಿಲ್ಲ. ನೂರಾರು ಅಶಿಕ್ಷಿತ ರೈತಾಪಿ ಮಹಿಳೆಯರು ಸ್ವಾತಂತ್ರ್ಯದ ವಿವಿಧ ಹೋರಾಟಗಳಲ್ಲಿ ಭಾಗಿಯಾಗಿದ್ದಾರೆ. ಶಿಕ್ಷಣವಿಲ್ಲದಿದ್ದರೂ ಹಲವಾರು ಸಾಮೂಹಿಕ ಚಳುವಳಿಗಳಲ್ಲಿ ಭಾಗವಹಿಸುವುದಕ್ಕೆ ಮಹಿಳೆಯರಿಗೆ ಸಾಧ್ಯವಾಗಿತ್ತು. ಆದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಒಂದು ಚಿಕ್ಕ ಸಮುದಾಯಕ್ಕೆ ಶಿಕ್ಷಣದ ಜ್ಞಾನ ಅತ್ಯಂತ ಫಲಕಾರಿಯಾಗಿ ಪರಿಣಮಿಸಿತು. ಹೊರಗಿನ- ವಿಶಾಲವಾದ ಜಗತ್ತಿನೊಂದಿಗೆ ಸ್ಪಂದಿಸಲು ಮತ್ತು ಸಂಪರ್ಕಿಸಲು ಶಿಕ್ಷಣ ಅತ್ಯುತ್ತಮ ಸಾಧನವಾಯಿತು. ಅಷ್ಟೇ ಅಲ್ಲ ಮಹಿಳೆಯರಿಗೇ ನಿಗದಿಯಾಗಿದ್ದ ಸಾಂಪ್ರದಾಯಿಕ ಪಾತ್ರಗಳನ್ನು ಮೀರಿ ಕ್ರಿಯಾಶೀಲವಾಗಿರಲು ಸಾಧ್ಯವಾಯಿತು. ಆಂಧ್ರದ 'ತೆಲಂಗಾಣ', ಬಂಗಾಲದ 'ತೇಭಾಗ' ಮತ್ತು ತ್ರಿಪುರಾದ 'ಜನಶಿಕ್ಷ' ಚಳುವಳಿಗಳಲ್ಲಿ ಭಾಗವಹಿಸಿದ ಮಹಿಳೆಯರು ರಾಜಕೀಯವಾಗಿ ಕ್ರಿಯಾಶೀಲರಾಗಿದ್ದಷ್ಟೇ ಅಲ್ಲದೆ ಶಿಕ್ಷಣದ ಪ್ರಾಮುಖ್ಯತೆಯತ್ತಲೂ ಆಕರ್ಷಿತರಾದರು. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಶಕ್ತಳಲ್ಲದ ಮಹಿಳೆಯೂ ವಿದ್ಯಾಭ್ಯಾಸ ಪಡೆದ ನಂತರ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಶಿಕ್ಷಣ ಮುಖ್ಯ ಕಾರಣವಾಗಲೆಂದು ಅಂದಿನ ನಾಯಕರು ಅಭಿಪ್ರಾಯಪಟ್ಟರು. ಭಾರತದ ಸಂವಿಧಾನವನ್ನು ರಚಿಸುವಾಗ ಮಹಿಳೆಯರ ಈ ಕೊಡುಗೆಯನ್ನು ಗುರುತಿಸಿಯೇ ಹೆಣ್ಣಿನ ವಿದ್ಯೆಪಡೆಯುವ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಲಾಯಿತು. ಆರಂಭದ ದಿನಗಳಿಂದ ಇಂದಿನವರೆಗೂ ಮಹಿಳಾ ಶಿಕ್ಷಣವನ್ನು ಪರಿಕಲ್ಪಿಸುವಾಗ ಒಂದು ನಿಶ್ಚಿತ ಉದ್ದೇಶವಿದ್ದೇ ಇರುತ್ತದೆ. ವಸಾಹತುಶಾಹಿಕಾಲದಲ್ಲಿ ರಾಷ್ಟ್ರೀಯತಾವಾದಿಗಳು ಮಹಿಳಾ ಶಿಕ್ಷಣವು ಅರ್ಹ ತಾಯಿ, ಅರ್ಹ ಹೆಂಡತಿ ಮತ್ತು ಕುಟುಂಬದ ಘನತೆಯನ್ನು ರಕ್ಷಿಸುವ ಸಾಧನವಾಗಿ ಭಾವಿಸಿದರು. ಇಂದಿನ ದಿನಗಳಲ್ಲೂ ಮಹಿಳಾ ಶಿಕ್ಷಣವನ್ನು ಮುಂದಿನ ಜನಾಂಗಗಳ ಸಾಕ್ಷರತೆಯನ್ನು ಕಾಯುವ ಸಾಧನವಾಗಿ ಪರಿಗಣಿಸಲಾಗುತ್ತದೆ. ಕುಟುಂಬದ ಗಾತ್ರವನ್ನು ಯೋಜಿಸಲು ಮಹಿಳಾ ಶಿಕ್ಷಣ ಅಗತ್ಯವೆಂದು ಭಾವಿಸಲಾಗುತ್ತದೆ. ಅಂದರೆ, ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳನ್ನು ವ್ಯತ್ಯಸ್ಥಗೊಳಿಸದೆ ಮಹಿಳಾ ಶಿಕ್ಷಣವು ನಿಶ್ಚಿತ ಉದ್ದೇಶವನ್ನು ಈಡೇರಿಸಬೇಕೆಂದು ಆಶಿಸಲಾಗುತ್ತದೆ.

ಆರಂಭದ ಸಮಾಜ ಸುಧಾರಕರಾದ ರಾಜರಾಮಮೋಹನರಾಯ ಮತ್ತು ಅವರ ಸಂಗಡಿಗರು ಹೆಣ್ಣಿನ ಶಿಕ್ಷಣದ ಬಗೆಗೆ ಒತ್ತುಕೊಡುವಾಗ ಅವಳಿಗೆ ಅವಕಾಶಗಳನ್ನು ದೊರಕಿಸಿಕೊಡುವುದರತ್ತಲೇ ಹೆಚ್ಚು ಗಮನ ಹರಿಸಿದರು. ಆದರೆ ಶಿಕ್ಷಣದ ತಿರುಳು ಏನಾಗಿರಬೇಕು, ಎಂಬ ಚರ್ಚೆ ಬಂದಾಗ ಅದು ಸಾಮಾನ್ಯವಾಗಿ ಆ ಕಾಲದ ಪಿತೃಪ್ರಧಾನ ಅಂಶಗಳನ್ನೂ ವರ್ಗಲಕ್ಷಣಗಳನ್ನು ಒಳಗೊಂಡಿರುತ್ತಿತ್ತು. ಈಗಲೂ 'ಸಾಮಾನ್ಯಶಿಕ್ಷಣ'ವೆಂಬ ತಲೆ ಬರಹದಲ್ಲಿ ಬೋಧಿಸುತ್ತಿರುವ ಬಹುಸಂಖ್ಯಾತ ಜನಸಮುದಾಯದ, ಅದರಲ್ಲೂ ಮಹಿಳೆಯರ ಶಿಕ್ಷಣದಲ್ಲಿ ಅವರ ಅಗತ್ಯಗಳು, ಕಾಳಜಿಗಳು ಅಭಿವ್ಯಕ್ತವಾಗುವುದೇ ಇಲ್ಲ. ಇದರಿಂದಾಗಿ ಸಶಕ್ತರಲ್ಲದ ಮಹಿಳೆಯರಿಗೆ ಈ ವಿದ್ಯಾಭ್ಯಾಸ ವ್ಯವಸ್ಥೆಯ ಎತ್ತರದ ಶಿಖರಗಳನ್ನು ಏರುವುದು ಸಾಧ್ಯವಾಗುವುದೇ ಇಲ್ಲ.

ಸಂಪೂರ್ಣ ಸಾಕ್ಷರತೆಯು ಇನ್ನೂ ಕನಸಾಗಿರುವ ನಮ್ಮ ದೇಶದಲ್ಲಿ ಮಹಿಳೆಯರಿಗೇನು, ಬಹುಸಂಖ್ಯಾತ ಪುರುಷರಿಗೂ ವಿದ್ಯಾಭ್ಯಾಸ ಕೈಗೆಟುಕದ ವಸ್ತುವಾಗಿದೆ. ಮಹಿಳೆಯ ವಿಷಯದಲ್ಲಿ ಇಂತಹ ಸ್ಥಿತಿಗೆ ಆರ್ಥಿಕ ಸಂಪನ್ಮೂಲಗಳ ಕೊರತೆಯ ಜೊತೆಗೆ ಸಾಂಪ್ರದಾಯಿಕ ಆಲೋಚನಾ ಕ್ರಮವೂ ಕಾರಣವಾಗಿರಬಹುದು. ಹುಡುಗಿಗೆ ಶಾಲೆಗೆ ಹೋಗುವ ಅವಕಾಶ ಸಿಕ್ಕರೂ ಅವಳಿಗೆ ಅದನ್ನು ಪೂರ್ತಿಗೊಳಿಸುವ ಅವಕಾಶವಿರುತ್ತದೆಂದೋ ಹೇಳಲಾಗುವುದಿಲ್ಲ. ಮನೆಯ ಕೆಲಸದ ಹೊರೆ ಹೊರಬೇಕೆಂಬ ಕಾರಣಕ್ಕೊ, ಇಲ್ಲವೆ ಸರಿಯಾದ ವಯಸ್ಸಿನಲ್ಲಿ ಮದುವೆಯಾಗಬೇಕೆಂಬ ಕಾರಣಕ್ಕೋ ಅವಳು ಶಾಲೆ ಬಿಡಬೇಕಾಗಬಹುದು ಈ ಎಲ್ಲ ಅಡೆತಡೆಗಳ ನಡುವೆಯೂ ಭಾರತದ ಹೆಣ್ಣು ಮಕ್ಕಳು ಶಿಕ್ಷಣದ ಹಲವಾರು ಸಾಧನೆಗಳನ್ನು ಮಾಡಿದ್ದಾರೆನ್ನುವುದು ಗಮನಾರ್ಹ ಸಂಗತಿಯಾಗಿದೆ.

'ಹಿಂದುತ್ವ'ದ ಪ್ರತಿಪಾದಕರು ಮಹಿಳೆಯರಿಗೆ ಶಿಕ್ಷಣದ ಅವಕಾಶವನ್ನು ನಿರಾಕರಿಸುವುದು ಭಾರತದಲ್ಲಿ ಸಾರ್ವಕಾಲಿಕ ಪ್ರಕ್ರಿಯೆಯಲ್ಲ. ವಿದೇಶಿ ಆಕ್ರಮಣಕಾರರ ದಾಳಿಯ ನಂತರ ಭಾರತದ ಮಹಿಳೆಯರು ಶಿಕ್ಷಣವಂತರಾಗುವ ಅವಕಾಶಗಳನ್ನು

ಕಳೆದುಕೊಂಡರು. ಆದರೆ ಪ್ರಾಚೀನ ಭಾರತದಲ್ಲಿ ಮಹಿಳೆಯರಿಗೆ ಶಿಕ್ಷಣಾವಕಾಶಗಳು, ಸಮಾನತೆಯು ಹೇರಳವಾಗಿತ್ತು ಎಂದುಹೇಳುತ್ತಲೇ ಇರುತ್ತಾರೆ. ಅದಕ್ಕೆ ಸಾಕ್ಷಿಯಾಗಿ ವೇದಕಾಲದ ಕೆಲವು ಕವಯಿತ್ರಿಯರ ಹೆಸರುಗಳನ್ನು, ಗಾರ್ಗಿ, ಮೈತ್ರೇಯಿ, ಅಪಲ ಮುಂತಾದ ಅಪವಾದಗಳನ್ನು ಪುನರುಚ್ಚರಿಸುತ್ತಿರುತ್ತಾರೆ. ಆದರೆ ವೇದಕಾಲದ ಅಂತ್ಯದ ವೇಳೆಗೆ ಮಹಿಳೆಯರ ಪಾತ್ರವು ಸಾಕಷ್ಟು ನಿಯಂತ್ರಣಕ್ಕೊಳಪಟ್ಟಿತ್ತು. ಸಾರ್ವಜನಿಕರಂಗದಲ್ಲಿ ಅವರ ಚಟುವಟಿಕೆ ಕಡಿಮೆಯಾಗಿತ್ತು ಎಂಬುದನ್ನು ಗಮನಿಸಬಹುದು. ಆಸ್ಥಾನ ಕಲಾವಿದರು ಇದಕ್ಕೆ ಅಪವಾದವಾಗಿದ್ದರು. ಮಹಿಳೆಯರ ಸಶಕ್ತೀಕರಣದ ಬಗ್ಗೆ ಮಾತನಾಡುವಾಗ ಈ ಎಲ್ಲಾ ವಾಸ್ತವ ಸತ್ಯಗಳನ್ನು ಮರೆಮಾಚಿ ನಮ್ಮ ಇತಿಹಾಸವನ್ನು ವೈಭವೀಕರಿಸುವುದರಲ್ಲಿ ಅರ್ಥವಿಲ್ಲ.

ಇಂದು ಮಹಿಳೆಯರ ಶಿಕ್ಷಣದ ಹಲವಾರು ಬದಲಾವಣೆಗಳನ್ನು ಮಾಡಬೇಕಾಗಿದೆ. ಮಹಿಳೆಯರಿಗೆ ಓದಲು ಅವಕಾಶಗಳನ್ನು ದೊರಕಿಸಿಕೊಡುವುದರ ಜೊತೆಗೆ ಅವರು ಶಿಕ್ಷಣವನ್ನು ಅರ್ಥಪೂರ್ಣವಾಗಿ ಪೂರ್ತಿಗೊಳಿಸುವಂತಹು-ದಾಗಬೇಕು. ಪಠ್ಯಕ್ರಮದಲ್ಲೂ ಸಾಕಷ್ಟು ಕ್ರಾಂತಿಕಾರಕ ಬದಲಾವಣೆಯಾಗುವಂತೆ ನೋಡಿಕೊಳ್ಳಬೇಕು. ಸಮಾಜದಲ್ಲಿ ಮತ್ತು ಚರಿತ್ರೆಯಲ್ಲಿ ಮಹಿಳೆಯರ ಅಸ್ತಿತ್ವವನ್ನು ಗುರುತಿಸುವಂತಹ ಪಠ್ಯಗಳು ಸಿದ್ಧವಾಗಬೇಕು. ಮಹಿಳೆಯರನ್ನು ಸಾಂಪ್ರದಾಯಿಕ ಪಾತ್ರಗಳಲ್ಲೂ ಪುರುಷರನ್ನು ಸಾರ್ವಜನಿಕ ರಂಗಗಳಲ್ಲಿ ಕಾಣಿಸುವಂತಹ ಪಾತ್ರಗಳನ್ನು ಬದಲಾಯಿಸಿ 'ಮಹಿಳೆಯ ಕೆಲಸ'ವು ಗೋಚರವಾಗುವಂತಹ ವಿಷಯಗಳು ಪಠ್ಯದಲ್ಲಿ ಕಾಣಿಸಿಕೊಳ್ಳಬೇಕು.

ಜ್ಯೋತಿಷ್ಯದಂತಹ ಯು.ಜಿ.ಸಿ. ಪ್ರಾಯೋಜಿತ ಉನ್ನತ ಶಿಕ್ಷಣದಡಿಯಲ್ಲಿ 'ನೈತಿಕ ಮೌಲ್ಯ'ಗಳನ್ನು ಬೋಧಿಸಲು ಅಮೂರ್ತ ಶಿಸ್ತುಗಳನ್ನು ಕಾಲೇಜುಗಳಲ್ಲಿ ಪರಿಚಯಿಸುತ್ತಿರುವುದು ಶಿಕ್ಷಣದಲ್ಲಿ ಹಿಂದಡಿಯಿಡುತ್ತಿರುವ ಹೆಜ್ಜೆಯೆ. ಪ್ರಾಕ್ತನಶಾಸ್ತ್ರ ಪ್ರಾಚೀನ ಚರಿತ್ರೆಯಂತಹ ವಿಷಯಗಳನ್ನು ಬೋಧಿಸುವಾಗ ಕೋಮುಭಾವನೆಗಳನ್ನು ಕೆರಳಿಸುವುದು. ಇಂತಹ ಶಿಸ್ತುಗಳನ್ನು ಕಲಿಸುವಾಗ ಪ್ರಾಚೀನ ಮತ್ತು ಮಧ್ಯಕಾಲೀನ ಯುಗದ ಹೆಣ್ಣಿನ ಸ್ಥಾನಮಾನಗಳ ಅವಲೋಕನ ಅತಿ ಮುಖ್ಯವಾಗುತ್ತದೆ. 'ಸತಿ' ಪದ್ಧತಿಯನ್ನು ವೈಭವೀಕರಿಸುವುದಕ್ಕೆ ಮತ್ತು ಹೆಣ್ಣನ್ನು ಗೃಹಬಂಧನದಲ್ಲಿಡುವುದಕ್ಕೆ ಮುಸ್ಲಿಂ ಆಕ್ರಮಣವನ್ನು ನೆಪಮಾಡುವುದು, ಜಾತಿ ಪದ್ಧತಿಯನ್ನು ಎತ್ತಿ ಹಿಡಿಯುವುದು ಮುಂತಾದವೇ ಚಿಂತನಾಕ್ರಮವನ್ನು ಶಿಕ್ಷಣದಲ್ಲಿ ಅಳವಡಿಸುವುದಾಗಿದೆ. ಇದರಿಂದಾಗಿ ಹೆಚ್ಚು ಸಮಾಜ ವಿಭಜನೆಯಾಗುವುದಷ್ಟೇ ಅಲ್ಲದೇ, ಸಮಾಜದ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ಕ್ರಿಯೆಯೂ ನಡೆಯುತ್ತದೆ. ಈ ರೀತಿಯ ಶಿಕ್ಷಣವು ವಿದ್ಯಾರ್ಥಿಗಳನ್ನು ಒಳ್ಳೆಯ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ನರನ್ನಾಗಿ ಮಾಡುವ ಪ್ರಯತ್ನವೆಂದು ಕೊಚ್ಚಿಕೊಂಡರೂ ಅವರನ್ನು ಒಳ್ಳೆಯ ಜವಾಬ್ದಾರಿಯುತ ಪ್ರಜೆಗಳನ್ನಾಗಿ ರೂಪಿಸಲು ಸೋಲುತ್ತದೆ. ಆದ್ದರಿಂದ 'ಮಹಿಳಾ ಶಿಕ್ಷಣ'ವೂ ಸೇರಿದಂತೆ ಎಲ್ಲ ರೀತಿಯ ಶಿಕ್ಷಣವು ಉತ್ತಮ ಪ್ರಜೆಗಳನ್ನು ರೂಪಿಸುವ ದಿಕ್ಕಿನಲ್ಲಿ ಯೋಜಿತವಾಗಿರಬೇಕು.

ಅಂತರರಾಷ್ಟ್ರೀಯ ಸಂಸ್ಥೆಗಳು ಪ್ರಕಟಪಡಿಸಿರುವ ನಮ್ಮ ದೇಶದ ಸಾಕ್ಷರತೆಯ ಅಂಕಿ ಸಂಖ್ಯೆಗಳನ್ನು ನೋಡೋಣ : 1991ರಲ್ಲಿ ಮಹಿಳಾ ಸಾಕ್ಷರತೆಯ 39.29 ಇದ್ದದ್ದು 2001ರಲ್ಲಿ 54.16 ಆಗಿದೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರಲ್ಲಿ ಸಾಕ್ಷರತೆಯ ಹೆಚ್ಚಳ ಗಮನಾರ್ಹವಾಗಿದೆ. 1970ರಿಂದ 1995ರಲ್ಲಿ ಮಹಿಳಾ ಸಾಕ್ಷರತೆಯು ಎರಡೂವರೆ ಪಟ್ಟು ಹೆಚ್ಚಾಗಿದೆ. ಆದ್ದರಿಂದ ಸ್ತ್ರೀಪುರುಷರ ಸಾಕ್ಷರತೆಯ ಅಂತರ 1991ರಲ್ಲಿ 24.84 ಇದ್ದದ್ದು 2001ರಲ್ಲಿ 21.69ರಷ್ಟು ಕಡಿಮೆಯಾಗಿದೆ. 1991ರ ಜನಗಣತಿಯಲ್ಲಿ 143 ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತೆಯು ಶೇಕಡ 50ರಷ್ಟಾಗಿ ಮಹಿಳಾ ಜನಸಂಖ್ಯೆಯ 27%ರಷ್ಟು ಮಹಿಳೆಯರು ಸಾಕ್ಷರರಾಗಿದ್ದರು. ಆದರೆ 2001ರಲ್ಲಿ 335 ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತೆಯು ಶೇಕಡ 58ರಷ್ಟಾಗಿ ಮಹಿಳಾ ಜನಸಂಖ್ಯೆಯ 71%ರಷ್ಟು ಸಾಕ್ಷರರಾಗಿದ್ದಾರೆ. 1991ರಲ್ಲಿ 103 ಜಿಲ್ಲೆಗಳಲ್ಲಿ ಶೇಕಡ 20ಕ್ಕೂ ಕಡಿಮೆ ಮಹಿಳಾ ಸಾಕ್ಷರರಿದ್ದರು. ಆದರೆ 2001ರಲ್ಲಿ ಈ ಲಕ್ಷಣವು ಕೇವಲ 2 ಜಿಲ್ಲೆಗಳಲ್ಲಿದೆ. ಈ ಎಲ್ಲ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಎಲ್ಲ ಅಡೆತಡೆಗಳ ನಡುವೆಯೂ ಕಳೆದ ದಶಕದಲ್ಲಿ ಮಹಿಳಾ ಸಾಕ್ಷರತೆಯಲ್ಲಿ ಹೆಚ್ಚಳವುಂಟಾಗಿದೆ.

ಆದರೂ ಶಿಕ್ಷಣ ಕ್ಷೇತ್ರದಲ್ಲಿ ಕಳೆದ ದಶಕದಲ್ಲಿ ನಡೆದ ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಯಿಂದಾಗಿ ಸ್ತ್ರೀ-ಪುರುಷರಿಬ್ಬರಿಗೂ ಶಿಕ್ಷಣದ ಹಲವಾರು ಅವಕಾಶಗಳು ಕಡಿಮೆಯಾಗುತ್ತಿವೆ. 1990ರಲ್ಲಿ ಆರಂಭವಾದ ರಚನಾತ್ಮಕ ಹೊಂದಾಣಿಕೆಯಿಂದಾಗಿ ಅಧಿಕಾರಕ್ಕೆ ಬಂದ ಎಲ್ಲ ಕೇಂದ್ರ ಸರ್ಕಾರಗಳು ವಿದ್ಯಾಭ್ಯಾಸದ ಪ್ರಗತಿಗೆ ತಾವು ಮಾಡಿಕೊಂಡ ಒಪ್ಪಂದಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿವೆ. ಈವರೆಗೆ ನಡೆದ ಪ್ರಗತಿಯನ್ನೂ ಹಿಂದಕ್ಕೆ ಎಳೆಯುವಂತಹ ಇಂತಹ ಪ್ರಯತ್ನಗಳು ನಿಜಕ್ಕೂ ಆಘಾತಕಾರಿಯಾದವು. ಹೊಸ ಆರ್ಥಿಕ ನೀತಿಯಿಂದಾಗಿ ಉನ್ನತ ಶಿಕ್ಷಣಕ್ಕೆ ಮೀಸಲಾದ ಸಂಪನ್ಮೂಲವನ್ನು ಕಡಿತಮಾಡುವುದು. ದಕ್ಷಿಣ ಏಷಿಯಾದ ಮಾನವ ಸಂಪನ್ಮೂಲ ವರದಿಯ ಪ್ರಕಾರ ಭಾರತದ ಒಟ್ಟು ಉನ್ನತಶಿಕ್ಷಣದ ನೋಂದಾವಣಿಯೇ ಶೇಕಡ 6ರಷ್ಟು ಮತ್ತೆ ಅದರಲ್ಲಿ ಸ್ತ್ರೀ-ಪುರುಷರ ನಡುವಿನ ಅಸಮಾನತೆ ಎದ್ದು ಕಾಣುತ್ತದೆ. ಗಂಡಸರ ಪ್ರಮಾಣ ಶೇಕಡ 8ರಷ್ಟಾದರೆ ಹೆಂಗಸರ ಪ್ರಮಾಣ ಶೇಕಡ 5ರಷ್ಟು.

1991ರಲ್ಲಿ ವಿಶ್ವಬ್ಯಾಂಕ್‌ಗಾಗಿ ಪಿ. ಕಾರ್ನಾಯ್ ತಯಾರಿಸಿದ ವರದಿಯು ಹೇಗೆ ಮಾಹಿತಿ ತಂತ್ರಜ್ಞಾನದ ಪ್ರಸಾರವು ವಿದ್ಯಾವಂತ ಮತ್ತು ಅರೆಕುಶಲಕರ್ಮಿಗಳಾದ ಮಹಿಳೆಯರಿಗೆ ಬೇಡಿಕೆಯನ್ನೊದಗಿಸಿತು ಎಂಬ ಅಂಶವನ್ನು ಪ್ರಸ್ತಾಪಿಸುತ್ತದೆ. ಆದ್ದರಿಂದ ಔದ್ಯೋಗಿಕ ರಾಷ್ಟ್ರಗಳಲ್ಲಿ ಮಹಿಳೆಯರ ಶಿಕ್ಷಣವು ನಿರ್ದಿಷ್ಟ ಪರಿಣತಿಗೆ ಒತ್ತು ಕೊಡುವುದಲ್ಲದೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅಗ್ಗದ ದುಡಿಮೆಯನ್ನು ಒದಗಿಸುವ ಸಾಧನವಾಗಿಯೂ ಕೆಲಸ ಮಾಡುತ್ತದೆ. ಒಟ್ಟಿನಲ್ಲಿ ಹಿಂದಿನ ಸಂದರ್ಭಗಳಲ್ಲಿ ಸೂಚಿಸಿದಂತೆ ಮಹಿಳೆಯರ ಶಿಕ್ಷಣವು ಬೇರೊಬ್ಬರ ಕಾರ್ಯಸೂಚಿಗೆ ಅನುಗುಣವಾಗಿ ಕೆಲಸ ಮಾಡುತ್ತದೆ. ಪಿ. ಕಾರ್ನಾಯ್‌ನ ವರದಿಯ ವಿಶ್ಲೇಷಣೆಯಲ್ಲಿ ಮಾಹಿತಿ ತಂತ್ರಜ್ಞಾನದ ಕೆಲಸಗಳಿಗೆ ಮಹಿಳೆಯರನ್ನು ಪುರುಷರ ಬದಲಿಗೆ ಇಚ್ಛಿಸುವುದರ ಆದ್ಯತೆಯ ಬಗ್ಗೆ ಕಾರಣಗಳು ಇಲ್ಲ. ಆದರೂ ಪುರುಷರಿಗೆ ಹೋಲಿಸಿದರೆ ಮಹಿಳೆಯರಿಗೆ ಕೊಸರಾಟದ ಶಕ್ತಿ ಕಡಿಮೆಯಿರುವುದು ಇಲ್ಲಿ ಒಂದು ಮುಖ್ಯ ಕಾರಣವಾಗಿರಬಹುದು.

ವಿದ್ಯಾಭ್ಯಾಸ ಮತ್ತು ಸಶಕ್ತೀಕರಣಕ್ಕೆ ನೇರವಾದ ಸಂಪರ್ಕವಿದೆಯೆಂದು ಹೇಳಲಾಗುವುದಿಲ್ಲ. ಆದರೆ ವಿದ್ಯಾಭ್ಯಾಸ ಪಡೆಯಲು ಮಹಿಳೆಯರಿಗಿರುವ ಅಡತಡೆಗಳು ಮತ್ತು ಸಶಕ್ತರಾಗಲು ಅವಳಿಗೆ ಅಡ್ಡಿಯಾಗುವ ತೊಂದರೆಗಳು, ಇವೆರಡಕ್ಕೂ ನೇರ ಸಂಬಂಧವಿದೆ. ಇಂದಿನ ಹೊಸ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಲ್ಲಿ ಮಹಿಳೆಯರು ಭಾಗವಹಿಸುವುದರಿಂದ ದೇಶವೂ ಬಲಿಷ್ಠವಾಗುತ್ತದೆ ಮತ್ತು ಮಹಿಳೆಯರೂ ಆರ್ಥಿಕವಾಗಿ ಸಬಲರಾಗುತ್ತಾರೆ ಎಂಬುದು ಒಂದು ಅರ್ಥದಲ್ಲಿ ನಿಜವಾದರೂ ಇಂದು ದೀರ್ಘಕಾಲದ ಕಾರ್ಯಕ್ರಮವಾಗಿ ಉಳಿಯುವುದಿಲ್ಲ. ತೀರ್ಮಾನಗಳನ್ನು ಮಾಡುವ ಪಾತ್ರದಲ್ಲಿ ಅವಳಿಗೇನೂ ಸ್ಥಾನವಿರುವುದಿಲ್ಲ. ತಾಂತ್ರಿಕ ಶಿಕ್ಷಣ ಮಹಿಳೆಯರಿಗೆ ಹಲವಾರು ಸಾಧ್ಯತೆಗಳನ್ನು ತೆರೆಯುತ್ತಿದೆಯೆನ್ನುವುದು ನಿಜವಾದರೂ ಅವಳು ಪಡೆಯುವ ಕೂಲಿಯು ಇಂದಿನ ವಿಶ್ವಮಾರುಕಟ್ಟೆಯ ಎಲ್ಲ ಏರಿಳಿತಗಳೊಂದಿಗೆ ನಿರ್ಧರಿತವಾಗುತ್ತದೆ. ಅಗ್ಗದ ಕೂಲಿ, ದೀರ್ಘ ದುಡಿಯುವ ಅವಧಿ, ಕೆಲಸದ ಅಭದ್ರತೆ, ಹೆರಿಗೆ ಸೌಕರ್ಯಗಳಿಲ್ಲದಿರುವುದು ಇವೆಲ್ಲವೂ ಅವಳ ಸಬಲೀಕರಣಕ್ಕೆ ಅಡ್ಡಿಯಾಗುತ್ತವೆ.

ಔದ್ಯೋಗೀಕರಣದ ಈ ಪ್ರಕ್ರಿಯೆ ಆರಂಭವಾಗುವಾಗ ರಚನಾತ್ಮಕ ಹೊಂದಾಣಿಕೆಯ ನೇತ್ಯಾತ್ಮಕ ಪರಿಣಾಮಗಳು ಹೆಚ್ಚು ಸ್ಪಷ್ಟವಾಗಿರುವುದಿಲ್ಲ. ಆದರೆ ಕಳೆದ ಒಂದು ದಶಕದ ಅವಧಿಯಲ್ಲಿ ಅದರ ನೇರ ಪರಿಣಾಮಗಳು ಹೆಚ್ಚು ಸ್ಪಷ್ಟವಾಗುತ್ತಾ ಹೊರಟಿವೆ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಹರಿದು ಬರುತ್ತಿರುವ ಸಾಲದ ಹೊಳೆಯು ಹೆಚ್ಚುತ್ತಿದ್ದು ಮತ್ತೊಂದು ಕಡೆ ಸರ್ಕಾರವು ವಿದ್ಯಾಭ್ಯಾಸಕ್ಕಾಗಿ ಯಾವ ಖರ್ಚನ್ನೂ ಮಾಡಲು ಸಿದ್ಧವಿಲ್ಲ. ಸಾರ್ವತ್ರಿಕ ಶಿಕ್ಷಣವನ್ನು ಕೊಡಬೇಕೆನ್ನುವ ಸರ್ಕಾರದ ಜವಾಬ್ದಾರಿಯೇ ಕಾಣೆಯಾಗುತ್ತಿದೆ. ಆದ್ದರಿಂದ 6ರಿಂದ 14 ವಯಸ್ಸಿನ ಮಕ್ಕಳಿಗೆ ಶಿಕ್ಷಣವು ಕಡ್ಡಾಯವೆಂದು ಹೇಳಿದರೂ 6 ವರ್ಷದ ಕೆಳಗಿನ ಮಕ್ಕಳ ಬಗ್ಗೆ ಸೊಲ್ಲೆತ್ತುವುದಿಲ್ಲ. ಆದ್ದರಿಂದ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಇದರಿಂದ ತೊಂದರೆ ಹೆಚ್ಚು. 6 ವರ್ಷದ ಕೆಳಗಿನ ಹೆಣ್ಣು ಮಕ್ಕಳನ್ನು ಈಗಾಗಲೇ ಮನೆಗೆಲಸಕ್ಕೆ ಹಾಕಿಕೊಂಡುಬಿಟ್ಟಿರುತ್ತಾರಾದ್ದರಿಂದ ಅವರು ಶಾಲೆಗೆ ಸೇರುವ ಸಾಧ್ಯತೆ ಕಡಿಮೆಯಾಗುತ್ತದೆ.

ಶಾಲೆಯಿಂದ ಹೊರಬೀಳುವ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗಲು ಕಾರಣಗಳನ್ನು ಗಮನಿಸಿದರೆ ಅವರು ಮನೆಯೊಳಗೆ ಮತ್ತು ಹೊರಗೆ ದುಡಿಯಬೇಕಾಗಿರುವುದು. 1991ರ ಜನಗಣತಿಯಲ್ಲಿ ಶಾಲೆಯಿಂದ ಹೊರಬಿದ್ದ ಬಾಲಕರು ಶೇಕಡ 35 ಇದ್ದರೆ ಬಾಲಕಿಯರು ಶೇಕಡ 39. ಪಾಕಿಸ್ಥಾನ ಮತ್ತು ಬಾಂಗ್ಲಾದೇಶದ ಅಂಕಿ ಸಂಖ್ಯೆಗೆ ಹೋಲಿಸಿದರೆ ಇದು ಕಡಿಮೆಯೆ. ಆದರೆ ಯುದ್ಧಗ್ರಸ್ಥ ಶ್ರೀಲಂಕಾದಲ್ಲಿ ಈ ಸಂಖ್ಯೆ ಬಾಲಕರಲ್ಲಿ ಶೇಕಡ 6 ಇದ್ದರೆ ಬಾಲಕಿಯರಲ್ಲಿ ಶೇಕಡ 7 ಆಗಿರುತ್ತದೆ. ಮಲೇಷಿಯಾದಲ್ಲಾದರೋ ಬಾಲಕರ ಮತ್ತು ಬಾಲಕಿಯರ ಶಾಲೆ ಬಿಡುವ ಸಂಖ್ಯೆ ಕೇವಲ ಶೇಕಡ 2. ಹೀಗಿರುವಾಗ ಭಾರತದ ಪರಿಸ್ಥಿತಿ ಗಂಭೀರವಾಗಿದೆ. ಕೆಲವೊಮ್ಮೆ ಬಡತನದೊಂದಿಗೆ ಸಾಂಸ್ಕೃತಿಕ ಕಾರಣವೂ ಸೇರಿಕೊಂಡು ಹೆಣ್ಣು ಮಕ್ಕಳಿಗೆ ಅಡ್ಡಗಾಲಾಗುತ್ತದೆ. ಹೆಣ್ಣು ಮಕ್ಕಳು ವಯಸ್ಸಿಗೆ ಬಂದ ನಂತರ ಸುರಕ್ಷಿತತೆಯ ಕಾರಣದಿಂದ ಅವರನ್ನು ಶಾಲೆ ಬಿಡಿಸುವುದು. ಮದುವೆ ಮಾಡಿ ಬಿಡುವ ತರಾತುರಿಯಲ್ಲಿ ಶಾಲೆ ಬಿಡಿಸುವುದು. ಬಾಲ್ಯ ವಿವಾಹಗಳಿಂದಾಗಿ ಶಾಲೆ ಬಿಡುವುದು ಸಾಮಾನ್ಯ ಪದ್ಧತಿಯಾದರೆ, ವರದಕ್ಷಿಣೆಯ ದುಷ್ಟ ಪದ್ಧತಿಯಿಂದಾಗಿ ಕಡಿಮೆ ವರದಕ್ಷಿಣೆ ಕೊಟ್ಟು ಬಾಲ್ಯ ವಿವಾಹ ಮಾಡಿಸುವ ಪದ್ಧತಿಯೂ ಆಚರಣೆಯಲ್ಲಿದೆ ವರದಕ್ಷಿಣೆಯ ಮದುವೆಗಳು ಹೆಣ್ಣು ಮಕ್ಕಳಿಗೆ ನಿಜವಾದ ಗಂಡಾಂತರವಾಗಿದೆ. ಹೆಚ್ಚು ಓದಿದರೆ ಹೆಚ್ಚು ವರದಕ್ಷಿಣೆ ಕೊಟ್ಟು ಓದಿದ ವರನನ್ನು ತರಬೇಕೆನ್ನುವ ಆತಂಕ ಮಹಿಳೆಗೆ ಶಿಕ್ಷಣ ಕೊಡಿಸುವಾಗ ತಂದೆ ತಾಯಿಗಳಲ್ಲಿ ಸದಾ ಕೆಲಸ ಮಾಡುತ್ತಿರುತ್ತದೆ.

ಆದ್ದರಿಂದಲೇ ಮಹಿಳೆಯರಿಗೆ ಕೊಡುವ ಶಿಕ್ಷಣವು ಸಾಮಾಜಿಕ ಅಧೀನತೆಯ ಎಲ್ಲ ರೂಪಗಳನ್ನು ಪ್ರಶ್ನಿಸುವಂಹುದಾಗಿರಬೇಕು. ಸಮಾಜದ ವಿವಿಧ ಸ್ತರದಿಂದ ಬರುವ ಮಹಿಳೆಯರು ವಿವಿಧ ರೀತಿಯ ಸಾಮಾಜಿಕ ಮತ್ತು ರಾಜಕೀಯ ಅಧೀನತೆಗಳಿಗೆ ಒಳಗಾಗಿರುತ್ತಾರೆ. ರೈತಾಪಿ ಕುಟುಂಬದಲ್ಲಿ ಮೊದಲಾದ ತಲೆಮಾರಿಗೆ ಸೇರಿದ ಮಹಿಳೆಯು ಅನುಭವಿಸುವ ತಾರತಮ್ಯತೆ ನಗರದ ಮಧ್ಯಮ ವರ್ಗದ ಮಹಿಳೆಯದಕ್ಕಿಂತ ಭಿನ್ನವಾದುದಾಗಿರುತ್ತದೆ. ಎರಡೂ ಸಂದರ್ಭದಲ್ಲಿ ಕೆಲವೇ ಕೆಲವು ಯಶಸ್ವೀ ಮಹಿಳಾ ಮಾದರಿಗಳನ್ನಿಟ್ಟುಕೊಂಡು ಮಹಿಳಾ ಶಿಕ್ಷಣದ ಬಗ್ಗೆ ಸಾಮಾನ್ಯೀಕರಿಸಿ ಹೇಳಲು ಸಾಧ್ಯವಿಲ್ಲ. ಆದರೆ ಇಂದು ಮಹಿಳೆಯರು ಬದುಕುತ್ತಿರುವ ಶಿಕ್ಷಣ ವ್ಯವಸ್ಥೆಯೇ ಲಿಂಗ ಸೂಕ್ಷ್ಮತೆಯ ಬಗ್ಗೆ, ಅಧಿಕಾರ ರಚನೆಗಳ ಬಗ್ಗೆ ವಿಮರ್ಶಾತ್ಮಕವಾಗಿ ಕೆಲಸ ಮಾಡಬೇಕಾಗಿದೆ. ಕೇವಲ ಶಿಕ್ಷಣ ಸಂಸ್ಥೆಗಳನ್ನು ಎದುರಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಆದರೆ ಇಂತಹ ಶಿಕ್ಷಣ ವ್ಯವಸ್ಥೆಗೆ ಕಾರಣವಾದ ಸಾಮಾಜಿಕ ವ್ಯವಸ್ಥೆಯಲ್ಲಿಯೇ ಕ್ರಾಂತಿಕಾರಕ ಬದಲಾವಣೆಯನ್ನುಂಟು ಮಾಡುವುದು ಅತ್ಯಗತ್ಯವಾಗಿದೆ. ಇದು ಜನಪರವಾದ, ಪ್ರಜಾಸತ್ತಾತ್ಮಕವಾದ ಚಳುವಳಿಯಿಂದ ಮಾತ್ರ ಸಾಧ್ಯ. ಅಂತಹ ಚಳುವಳಿಯಲ್ಲಿ ಮಹಿಳೆಯರೂ ಪ್ರಮುಖ ಪಾತ್ರವಹಿಸಬೇಕು.

(Behind the blackboard - volum II ನಲ್ಲಿ ಮಾಲಿನಿ ಭಟ್ಟಾಚಾರ್ಯರವರ ಲೇಖನದ ಸಂಕ್ಷಿಪ್ತ ಅನುವಾದ)

ಪುಸ್ತಕ ವಿಮರ್ಶೆ

ಅಭಿವೃದ್ಧಿಯ ರಾಜಕೀಯ

ಈ ಪುಸ್ತಕ ಓದುಗನನ್ನು ಚಿಂತಿಸುವಂತೆ ಮಾಡುತ್ತದೆ. ಈ ಪುಸ್ತಕದ ದೃಷ್ಟಿಕೋನವನ್ನು ಯಾರೇ ಒಪ್ಪಲಿ, ಬಿಡಲಿ ಚಿಂತನೆಗೆ ಒಳ್ಳೆಯ ಗ್ರಾಸವನ್ನು ಒದಗಿಸುತ್ತದೆ. ಈ ಪುಸ್ತಕದಲ್ಲಿ ಹನ್ನೊಂದು ಲೇಖನಗಳು ಭಾರತದಲ್ಲಿ ಮಹಿಳೆಯ ಅಭಿವೃದ್ಧಿಯನ್ನು ಕುರಿತಂತೆ ವೈವಿಧ್ಯಮಯ ಅನುಭವವನ್ನು ಸೆರೆಹಿಡಿಯುತ್ತವೆ. ಈ ಪುಸ್ತಕದ ಮೊದಲನೆಯ ಅಧ್ಯಾಯದಲ್ಲಿ ಮಹಿಳೆಯರನ್ನು ಹೀನಾಯವಾಗಿ ಕಾಣುವ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಗಳನ್ನು ಅವುಗಳ ಸಂವಾದವನ್ನು ಕುರಿತದ್ದಾಗಿದೆ. ಮಹಿಳೆಯರ ಸ್ಥಿತಿಗತಿಗಳಲ್ಲಿ ಪ್ರಗತಿಯ ಅಂಶಗಳು ಕಂಡುಬಂದರೂ, ವಿದ್ಯಾಭ್ಯಾಸದ ಅಂಕಿಸಂಖ್ಯೆಗಳಲ್ಲಿ ಗಮನಾರ್ಹವಾಗಿ ಹೆಚ್ಚಳವಾಗಿದ್ದರೂ, ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದ್ದರೂ ಒಟ್ಟಾರೆಯಾಗಿ ಹೆಂಗಸರ ಭವಿಷ್ಯವು ಅತ್ಯಂತ ನಿರಾಶಾದಾಯಕವಾಗಿಯೆ ಇದೆ. ಏಕೆಂದರೆ ಅಂಕಿ ಸಂಖ್ಯೆಗಳಲ್ಲಿ ಕಂಡುಬರುವ ಮಹಿಳಾ ಪ್ರಗತಿಯೂ ಹಲವಾರು ರಹಸ್ಯ ಸಂಗತಿಗಳನ್ನು ಪ್ರಕಟಪಡಿಸದೆ ತನ್ನೊಳಗೆ ಮುಚ್ಚಿಕೊಂಡಿದೆ.

ಈ ಪುಸ್ತಕವು ಅಂಕಿ ಸಂಖ್ಯೆಗಳಾಚೆ ದುಡಿಯುವ ಕ್ಷೇತ್ರದಲ್ಲಿನ ಪ್ರಕ್ರಿಯನ್ನು ಭಾರತದ ಪ್ರಗತಿಯ ಸಂದರ್ಭದಲ್ಲಿ ಚರ್ಚಿಸುತ್ತದೆ. ಮಹಿಳೆಯರಿಗೆ ತೆರೆದಿಟ್ಟಿರುವ ದುಡಿಯುವ ಕೆಲಸಗಳು, ಶಿಶುಹತ್ಯೆಯನ್ನು ಭ್ರೂಣಹತ್ಯೆಯಾಗಿ ಪರಿವರ್ತಿಸುವ ಆಧುನಿಕ ತಂತ್ರಜ್ಞಾನ, ಹೆಂಗಸರೇ ನಿರ್ವಹಿಸಬೇಕಾದ ಸಂತಾನ ನಿಂತ್ರಣದ ಜವಾಬ್ದಾರಿ, ಹೆಣ್ಣಿನ ಮೇಲೆ ನಡೆಸಲಾಗುವ ವಿವಿಧ ರೀತಿಯ ಕ್ರೌರ್ಯಗಳು, ಮತೀಯ ಕಾನೂನುಗಳ ದೌರ್ಬಲ್ಯಗಳು - ಹೀಗೆ ಹತ್ತು ಹಲವಾರು ಸಂಗತಿಗಳು ಸ್ವತಂತ್ರ ಭಾರತದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತವೆ. ವಸಾಹತುಶಾಹಿ ಕಾಲದಲ್ಲಿಯಂತೆ ಇಂದಿಗೂ ಪಿತೃಪ್ರಧಾನ್ಯತೆಯು ಹೊಸರೂಪದಲ್ಲಿ ಹೆಣ್ಣನ್ನು ಕಾಡುತ್ತಲೇ ಇರುತ್ತದೆ. ಧಾರ್ಮಿಕ ಮತ್ತು ಜಾತಿಯ ಅಡ್ಡಗೋಡೆಗಳು ಎಲ್ಲ ಹೆಂಗಸರನ್ನು ಒಂದಾಗಿ ಕಾಣುವಂತೆ ಗುರುತಿಸಿಕೊಳ್ಳಲಾಗದೆ ಒಡೆಯುತ್ತಿವೆ. ಆದ್ದರಿಂದಲೇ ಕೋಮು ಮತ್ತು ಜಾತಿ ಸಂಘರ್ಷಗಳಲ್ಲಿ ಮಹಿಳೆಯರೇ ಮಹಿಳೆಯರ ವಿರುದ್ಧ ಹೋರಾಡುವಂತೆ ಪ್ರೇರೇಪಿಸಲಾಗುತ್ತದೆ. ಈ ಬೆಳವಣಿಗೆಗಳನ್ನು ಸ್ತ್ರೀವಾದಿಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಈ ಪುಸ್ತಕವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೇ ಭಾಗದಲ್ಲಿ ಅಭಿವೃದ್ಧಿ ಹಾದಿಯಲ್ಲಿ ಮಹಿಳೆಯರು ಎದುರಿಸಬೇಕಾದ ಸವಾಲುಗಳನ್ನು ಕುರಿತಾಗಿದೆ. ಉದ್ಯೋಗ ಮತ್ತು ವಿದ್ಯಾಭ್ಯಾಸ ನೇರವಾಗಿ ಸಶಕ್ತೀಕರಣಕ್ಕೆ ಕಾರಣವಾಗುವುದಿಲ್ಲವೆಂಬ ಅಂಶವನ್ನು ಚರ್ಚಿಸಲಾಗಿದೆ. ಲಿಂಗ ಸೂಕ್ಷ್ಮತೆಯಿಲ್ಲದಾಗ ಹುಟ್ಟಬಹುದಾದ ಅಭಿವೃದ್ಧಿಯೊಳಗಿನ ಹಿಂಸೆಯನ್ನು ವ್ಯಾಪಕವಾಗಿದ್ದ ವರದಕ್ಷಿಣೆಯಂತಹ ಸಮಸ್ಯೆಗಳು ದಕ್ಷಿಣ ಭಾರತದ ಎಲ್ಲ ಜಾತಿ, ವರ್ಗಗಳಿಗೆ ಇಳಿದಿದೆಯೆಂಬುದನ್ನು ಚರ್ಚಿಸುತ್ತದೆ.

ಈ ಪುಸ್ತಕದ ಎರಡನೆಯ ಭಾಗದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಬದುಕಿನಲ್ಲಿ ಹಿಂಸೆಯು ವಹಿಸುವ ಪಾತ್ರವನ್ನು ಮತ್ತು ಅದು ಮಹಿಳಾ ಚಳುವಳಿಯನ್ನು ಪ್ರಭಾವಿಸಿದ ರೀತಿಯನ್ನು ಕುರಿತು ಹೇಳುತ್ತದೆ. ಖಾಸಗಿ ಬದುಕಿನಲ್ಲಿ ಕಂಡುಬರುವ ಹಿಂಸೆಯು ಎಲ್ಲರಿಗೂ ಸುಪರಿಚಿತವಾಗಿದ್ದೇ. ಕುಟುಂಬದೊಳಗಿನ ಲೈಂಗಿಕ ಹಿಂಸೆ, ಕೊಲೆ, ನೇಣುಹಾಕುವುದು, ಹೊಡೆತ, ಚಿಕ್ಕ ಹುಡುಗಿಯರ ಮೇಲೆ ಲೈಂಗಿಕ ಹಲ್ಲೆ, ಅತ್ಯಾಚಾರ, ಗರ್ಭಿಣಿಯ ಮೇಲೆ ಲೈಂಗಿಕ ಹಿಂಸೆ, ಬೆಂಬಲವಿಲ್ಲದ ಗಂಡನ ಮನೆಯಲ್ಲಿ ಬದುಕುವುದು, ಇವೇ ಮುಂತಾದವು. ಕೆಲವೊಮ್ಮೆ ಮಗಳು ಸತ್ತ ಮೇಲೆ ತಂದೆಯೇ ಅಳಿಯನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅಪರಾಧಿಗೆ ಶಿಕ್ಷೆಯಾಗದಂತೆ ತಡೆಯುವುದು. ಇವಕ್ಕೆಲ್ಲಾ ಕಾರಣ, ಅತ್ಯಂತ ಚಿಕ್ಕದಿರಬಹುದು. ಇಲ್ಲವೆ ದೊಡ್ಡದಿರಬಹುದು. ಉದಾಹರಣೆಗೆ, ಮನೆಗೆಲಸ ಮಾಡದಿರಬಹುದು. ಅಲಂಕಾರ ಮಾಡಿಕೊಳುತ್ತಿರು--ತ್ತಾಳೆನ್ನುವುದು, ಗಂಡನ ಅಸೂಯೆ, ಗಂಡನ ಕುಡಿತ, ವರದಕ್ಷಿಣೆಯ ಬೇಡಿಕೆಗಳು, ಗಂಡನ ವಿವಾಹೇತರ ಸಂಬಂಧಗಳು - ಈ ರೀತಿ ಏನೇ ಕಾರಣವಾದರೂ ಆಗಬಹುದು.

ಈ ರೀತಿ ಕೌಟುಂಬಿಕ ದೌರ್ಜನ್ಯದಿಂದ ಸಾರ್ವಜನಿಕ ಬದುಕಿನ ದೌರ್ಜನ್ಯಕ್ಕೆ ಬಂದರೆ ಹೇಗೆ ಜಾತಿ ಮತ್ತು ಕೋಮು ಗಲಭೆಗಳು ಮಹಿಳಾ ಚಳುವಳಿಗೆ ಧಕ್ಕೆಯುಂಟು ಮಾಡಿದೆಯೆಂಬುದನ್ನು ಲೇಖಕರು ಸ್ಪಷ್ಟವಾಗಿ ನುಡಿಯುತ್ತಾರೆ. 'ಹಿಂದು' ಮಹಿಳೆಯ ಪರಿಕಲ್ಪನೆ, ಬಾಬ್ರಿ ಮಸೀದಿ ಉರುಳಿದ ಮೇಲೆ ಸ್ತ್ರೀವಾದಿ ಕಾರ್ಯಕರ್ತರು ಎದುರಿಸಿದ ಅಭದ್ರತೆ, ಧಾರ್ಮಿಕ ನಾಯಕರು ಹಿಂದುಗಳಾದ ಮಹಿಳೆಯರ ಮೇಲೆ ಹೇರಿದ ಕಟ್ಟುಪಾಡುಗಳು. ವಸ್ತ್ರಸಂಹಿತೆ; 'ಭಾರತೀಯತೆ'ಯೆನ್ನುವ ಪರಿಕಲ್ಪನೆಯನ್ನು ಸಾಂಸ್ಕೃತಿಕವಾಗಿ ಮಹಿಳೆಯರ ಮೇಲೆ ಹೇರುವ ಪ್ರಯತ್ನಗಳು ಮುಂತಾದವನ್ನು ಚರ್ಚಿಸುತ್ತವೆ.

ಒಟ್ಟಿನಲ್ಲಿ ಮಹಿಳೆಯರು ಪುರುಷದಬ್ಬಾಳಿಕೆಗೆ ಒಳಗಾಗುವ ಅನಿವಾರ್ಯತೆಯನ್ನು ಬಿಡಿಸಿಹೇಳುತ್ತಾರೆ. ದೊಂಬಿಯ ಸಂದರ್ಭದಲ್ಲಿ ಗಂಡಸರು ಹೆಂಗಸರ ಮೇಲೆ ನಡೆಸುವ ದಬ್ಬಾಳಿಕೆಗೆ ನೆರವು ನೀಡುವ ಮಹಿಳೆಯರು, ವಿಧವೆಯರನ್ನು ಮೂದಲಿಸುವ, ಅವಮಾನಿಸುವ ಮಹಿಳೆಯರು, ಧರ್ಮ ಮತ್ತು

ಸಂಪ್ರದಾಯ ಹೆಸರಿನಲ್ಲಿ ವರದಕ್ಷಿಣೆ ಪದ್ಧತಿಯನ್ನು ಹೇರುವ ಹೆಂಗಸರು - ಹೀಗೆ ತಾಯಿಯರಾಗಿ, ಹೆಂಡತಿಯರಾಗಿ, ದಲಿತ, ಹಿಂದು, ಮುಸ್ಲಿಂ ಮತ್ತು ವಿವಿಧ ಪಕ್ಷಗಳ ಮಹಿಳೆಯರಾಗಿ ಹಲವಾರು ಅನುಭವಗಳ ಒತ್ತಡಕ್ಕೆ ಮಹಿಳೆಯರು ಗುರಿಯಾಗುತ್ತಾರೆ. ಆದ್ದರಿಂದಲೇ ಮಹಿಳೆಯರನ್ನು 'ಶೋಷಿತ ಸಮುದಾಯ'ವಾಗಿ ಒಟ್ಟಾಗಿ ನೋಡಲು ಬಯಸುವ ಮಹಿಳಾ ಕಾರ್ಯಕರ್ತರಿಗೆ ಎದುರಾಗುವ ಸವಾಲುಗಳು ಇವು.

ಪುಸ್ತಕದ ಮೂರನೇ ಭಾಗದಲ್ಲಿ ಮಹಿಳೆಯರು ಗಳಿಸಿಕೊಂಡ ಪ್ರಜಾಪ್ರಭುತ್ವದಲ್ಲಿ ಭಾಗವಹಿಸುವ ಅವಕಾಶಗಳನ್ನು ಕುರಿತಂತೆ ಚರ್ಚಿಸುತ್ತದೆ. ಸಾಂವಿಧಾನಿಕವಾಗಿ ಮಹಿಳೆಯರಿಗೆ ಸಿಕ್ಕಿದ ಮೂರನೇ ಒಂದು ಮೀಸಲಾತಿಯಿಂದಾಗಿ ಅಧಿಕಾರದ ವಿಕೇಂದ್ರೀಕರಣದಿಂದ ಪಾಲ್ಗೊಳ್ಳಲು ಸಾಧ್ಯವಾದರೂ ರಾಜಕೀಯ ಬದ್ಧತೆಯಿಲ್ಲದಿದ್ದರೆ ಪರಿಣಾಮಕಾರಿಯಾಗಿರುವುದಿಲ್ಲವೆಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಅಸಾಂಪ್ರದಾಯಿಕ ಪಾತ್ರಗಳಲ್ಲಿ ಮಹಿಳೆಯನ್ನು ಒಪ್ಪಕೊಳ್ಳದಿರುವಿಕೆಯ ಮನಃಸ್ಥಿತಿಯು ಇಲ್ಲಿ ವ್ಯಕ್ತವಾಗುತ್ತದೆ. ಬೇರಿನ ನೆಲೆಯಲ್ಲಿ ಸಂಘಟಿತರಾಗಿರುವ ಮಹಿಳೆಯರು ಸರ್ಕಾರದ ಬೆಂಬಲದಿಂದ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಿರಬಹುದಾದರೂ ಒಟ್ಟಾರೆಯಾಗಿ ಮಹಿಳೆಯರ ಪಾತ್ರವನ್ನು ಗುಮಾನಿಯಿಂದ, ಇಲ್ಲದೆ ಅಸಡ್ಡೆಯಿಂದ ನೋಡುವ ಸಂದರ್ಭಗಳೇ ಹೆಚ್ಚು. ಕೆಲವೊಮ್ಮೆ ಅವರು ಕಾರ್ಯನಿರ್ವಹಿಸಲು ಅಡೆತಡೆಗಳನ್ನು ಒಡ್ಡುವುದೂ ಉಂಟು ಕೂದಲೆಳೆಯುವುದು, ಅಡ್ಡಹಾಕುವುದು, ಸಭೆಗಳಲ್ಲಿ ಭಾಗವಹಿಸಿದಂತೆ ತಡೆಯುವುದು, ಬೆತ್ತಲೆ ಮಾಡುವುದು, ಮಹಿಳೆಯರು ಮುಖ್ಯಸ್ಥರಾಗಿರುವ ಪಂಚಾಯಿತಿಗಳಲ್ಲಿ ಅವರು ಕಾರ್ಯನಿರ್ವಹಿಸಿದಂತೆ ತಡೆಯುವುದು, ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿದ ಮಹಿಳೆಯರಿಗೆ ಕಾಟ ಕೊಡುವುದು - ಇಂತಹ ಕಷ್ಟಗಳನ್ನು ಕೊಡುವವರು ಕುಟುಂಬದ ಹೊರಗಿನವರು ಮಾತ್ರ ಆಗಿರಬೇಕಿಲ್ಲ. ಕುಟುಂಬದ ಒಳಗಿನವರೂ ಆಗಿರಬಹುದು. ಇಲ್ಲಿ ಪ್ರಸಿದ್ಧ ಭಾಂವ್ರಿದೇವಿ ಪ್ರಕರಣವನ್ನು ಉದಾಹರಿಸುತ್ತಾರೆ. ಬಾಲ್ಯವಿವಾಹವನ್ನು ತಡೆಯಲು ಹೋದ ಭಾಂವ್ರಿದೇವಿ ಮೇಲ್ಜಾತಿಯ, ಮೇಲ್ವರ್ಗದ ಪುರುಷ ದೌರ್ಜನ್ಯಕ್ಕೆ ತುತ್ತಾಗಿ ಅತ್ಯಾಚಾರಕ್ಕೊಳಗಾದದ್ದು ಮಹಿಳೆಯು ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವುದು ಎಷ್ಟು ಕಷ್ಟ ಎಂಬುದನ್ನು ತೋರಿಸುತ್ತದೆ.

ಇದಕ್ಕೆ ಪ್ರತಿಯಾಗಿ ಮಹಿಳೆಯರು ಸಂಘಟಿತರಾದಾಗ ಸಾಧಿಸಬಹುದಾದ ಪ್ರಗತಿಯನ್ನು 'ಮಹಿಳಾ ಸಮಖ್ಯ'ದ ನಿದರ್ಶನದೊಂದಿಗೆ ಈ ಪುಸ್ತಕದಲ್ಲಿ ಪ್ರಸ್ತುತಪಡಿಸುತ್ತಾರೆ. ಸ್ವಸಹಾಯ ಗುಂಪುಗಳಲ್ಲಿ ಸಂಘಟಿತರಾದ ಮಹಿಳೆಯರು ಉಳಿತಾಯ, ಸಾಲ ಮುಂತಾದ ಹಣಕಾಸಿನ ವಿಷಯಗಳಾಚೆಗೂ ವಿಸ್ತರಿಸಿ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಪಂಚಾಯತಿಗಳಲ್ಲಿ ಸಕ್ರಿಯವಾಗಿರುವಂತಹ ಬೆಳವಣಿಗೆಯನ್ನು ತೋರಿಸಿದ್ದಾರೆ. ತಮಿಳುನಾಡು, ಮಣಿಪುರ, ಮಹಾರಾಷ್ಟ್ರದ ನಿದರ್ಶನಗಳನ್ನು ಕೊಡುತ್ತಾರೆ.

ಪಿತೃಪ್ರಧಾನ್ಯತೆಯ ಅಧಿಕಾರದ ನೆಲೆಗಳು ಔಪಚಾರಿಕವಾಗಿ (ಸರ್ಕಾರ, ಕಛೇರಿ ಮುಂತಾಡೆಗಳಲ್ಲಿ) ಮತ್ತು ಅನೌಪಚರಿಕವಾಗಿ (ಜಾತಿ, ಸಮುದಾಯ, ಕುಟುಂಬ) ಆಳುತ್ತಿರುವಾಗ ಮಹಿಳೆಯರು ಆಯ್ಕೆಗಳಿಂದ ಮತ್ತು ಅವಕಾಶಗಳಿಂದ ವಂಚಿತರಾಗುತ್ತಾರೆ, ಎನ್ನುವ ವಿಷಯವನ್ನು ಆನಂದಿ ವಿಶ್ಲೇಷಿಸುತ್ತಾರೆ. ಬಹಳಷ್ಟು ಸಂದರ್ಭಗಳಲ್ಲಿ ಅಧಿಕೃತ ನೆಲೆಗಳೇ ಅಧಿಕಾರಶಕ್ತಿಗಿಂತ ಅನಧಿಕೃತ 'ಔಪಚಾರಿಕ' ನೆಲೆಯ ಅಧಿಕಾರ ಶಕ್ತಿಯೇ ಮಹಿಳೆಯನ್ನು ಹೆಚ್ಚು ನಿಯಂತ್ರಿಸುತ್ತಿರುತ್ತದೆ. ಈ ಲೇಖನದಲ್ಲಿ ಲೇಖಕಿಯು ಮೀಸಲು ಕ್ಷೇತ್ರದಲ್ಲಿ ಚುನಾಯಿತರಾದ ಪ್ರತಿನಿಧಿಗಳ ಸಂದರ್ಶನವನ್ನು ಕೊಟ್ಟಿದ್ದಾರೆ. ಈ ವಿಶ್ಲೇಷಣೆಯಲ್ಲಿ ಅಭಿವೃದ್ಧಿ ಮಾದರಿಯು ಮಹಿಳೆಯರಿಗೆ ಮಾತ್ರ ಸವಾಲಾಗಿಲ್ಲ, ಹಿಂಸೆಯು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳನ್ನು ವ್ಯಾಪಿಸಿದೆ. ಆದರೂ ಲಿಂಗವಿಷಯಕ್ಕೆ ಬಂದಾಗ ಅದು ಪಡೆದುಕೊಳ್ಳುವ ಸ್ವರೂಪ ಮಾತ್ರ ಗಾಭರಿ ಹುಟ್ಟಿಸುತ್ತದೆ.

ಪುಸ್ತಕದ ನಾಲ್ಕನೆಯ ಭಾಗದಲ್ಲಿನ ಲೇಖನಗಳು ಅತ್ಯಂತ ಬಿಗಿಯಾಗಿ ರಚಿಸಲ್ಪಟಿದ್ದು ಮಹಿಳೆಯನ್ನು ವಿಭಜಿಸಿದ ಶಕ್ತಿಗಳ ಚಾರಿತ್ರಿಕ ವಿಶ್ಲೇಷಣೆ ಸಿಗುತ್ತದೆ. ವಸಾಹತು ಭಾರತದಲ್ಲಿ 'ರಾಷ್ಟ್ರೀಯತೆ'ಯ ಪರಿಕಲ್ಪನೆ, ಜಾತಿ, ಧರ್ಮಗಳ ಗೋಡೆಗಳಲ್ಲಿ ವಿಭಜಿಸಲ್ಪಟ್ಟ ಮಹಿಳೆಯರು 'ಮಹಿಳೆಯರ ರಾಜಕೀಯ 'ಪ್ರತ್ಯೇಕತೆ'ಯ ಪರಿಕಲ್ಪನೆಗಳನ್ನು ಹೆಚ್ಚು ಗಟ್ಟಿಗೊಳಿಸಿದರು. ಬ್ರಿಟಿಷರ ಕಾಲದಲ್ಲಿ ಸರಳಾದೇವಿ ಮಹಿಳಾ ಕಾಂಗ್ರೆಸ್‌ನ್ನು ಪ್ರತ್ಯೇಕವಾಗಿ ಮಾಡಬೇಕಾದ್ದನ್ನು ಪ್ರಸ್ತಾಪಿಸಿದ್ದು ಕುತೂಹಲಕಾರಿಯಾಗಿದೆ. ಅವರು ಹೇಳುವ 'ಕಾಂಗ್ರೆಸ್ ನಮಗೆ ಯಾವಾಗಲೂ ಕಾನೂನು ಭಂಗ ಮಾಡುವುದನ್ನು ಕಲಿಸಿತೇ ಹೊರತು ನಮ್ಮದೇ ಕಾನೂನುನ್ನು ಪ್ರಸ್ತಾಪಿಸುವುದನ್ನು ಕಲಿಸಲಿಲ್ಲ' ಎನ್ನುವ ಮಾತುಗಳು ಗಮನಾರ್ಹ. ಗಾಂಧಿಯವರು ಪ್ರತಿಪಾದಿಸಿದ ಧ್ಯೇಯೋದ್ದೇಶಗಳನ್ನು ಮುಂದುವರಿಸುವ ವಾಹಕರಾಗಿ ಮಹಿಳೆಯರು ಬಳಕೆಯಾದರು.

ಸ್ವಾತಂತ್ರ್ಯಾನಂತರದ ಐದು ದಶಕಗಳ ಅನುಭವದಲ್ಲಿ ಹೊಸ ಸಮಸ್ಯೆಗಳು ಹಳೆಯ ಸಮಸ್ಯೆಗಳನ್ನು ಸ್ಥಳಾಂತರಿಸಿವೆ. ಶಾಸನ ಸಭೆ ಮತ್ತು ಸಂಸತ್ತಿನಲ್ಲಿ ಮಹಿಳೆಯರ ಪ್ರತಿನಿಧಿಗಳ ಸಂಖ್ಯೆ ತುಂಬಾ ಕಡಿಮೆ. ಸಾಂವಿಧಾನಿಕವಾಗಿ ಸ್ತ್ರೀಪುರುಷರಿಬ್ಬರೂ ಸಮಾನರು ಎಂದು ಹೇಳಿದರೂ ಪ್ರತ್ಯೇಕ ಮತೀಯ ಕಾನೂನಿನಿಂದ ಸಮಾನತೆ ಸಿಕ್ಕಿಲ್ಲ. ಆದರೂ ಈ ಪುಸ್ತಕವು ನಿರಾಶೆಯ ಧ್ವನಿಯೊಂದಿಗೆ ಅಂತ್ಯಗೊಳ್ಳದೆ ಮಹಿಳೆ ಸಶಕ್ತೀಕರಣಕ್ಕೆ ಒಳಗಾಗುವ ಪ್ರಕ್ರಿಯೆಯನ್ನು ವಿಸ್ತಾರವಾಗಿ ಚರ್ಚಿಸುತ್ತದೆ.

- *ಅಚಲ*

ದಿ ವಾಯಲೆನ್ಸ್ ಆಫ್ ಡೆವಲಪ್‌ಮೆಂಟ್ : ದಿ ಪಾಲಿಟಿಕ್ಸ್ ಐಡೆಂಟಿಟಿ, ಜೆಂಡರ್ ಅಂಡ್ ಸೋಷಿಯಲ್ ಇನ್‌ಈಕ್ವಾಲಿಟೀಸ್ ಇನ್ ಇಂಡಿಯಾ.
ಸಂಪಾದಕರು : ಕರೀನ್ ಕಪಾಡಿಯಾ, ಕಾಳಿ ಪಬ್ಲಿಕೇಷನ್ಸ್, 2002

ಪುಸ್ತಕ ಪರಿಚಯ

ವರದಕ್ಷಿಣೆಯ ವಿವಿಧ ಆಯಾಮಗಳು

ಎಕ್ಸ್‌ಪ್ಯಾಂಡಿಂಗ್ ಡೈಮನ್ಷನ್ಸ್ ಆಫ್ ಡೌರಿ -
ಪ್ರಕಟಣೆ : ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ನವದೆಹಲಿ, 2003 ಬೆಲೆ ರೂ. 40

ನವದೆಹಲಿಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಮಹಿಳಾ ಅಧ್ಯಯನ ಮತ್ತು ಅಭಿವೃದ್ಧಿಯ ಅಧ್ಯಯನ ಶಾಲೆಯು ಜಂಟಿಯಾಗಿ ಸೆಪ್ಟೆಂಬರ್ 2002ರಲ್ಲಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಪ್ರಸ್ತುತ ಪಡಿಸಿದ ಪ್ರಬಂಧಗಳ ಸಂಕಲನ. ಈ ಸಂಕಲನದ ಲೇಖನಗಳು ದೇಶದ ಉದ್ದಗಲಕ್ಕೂ ವ್ಯಾಪಕವಾಗಿ ಹಬ್ಬಿರುವ ವರದಕ್ಷಿಣೆ ಪದ್ಧತಿಯು ಎತ್ತುವ ಹಲವಾರು ಪ್ರಶ್ನೆಗಳನ್ನು ಉತ್ತರಿಸಲು ಪ್ರಯತ್ನಿಸುತ್ತದೆ. ಅಖಿಲಭಾರತ ಜನವಾದಿ ಮಹಿಳಾ ಸಂಘಟನೆಯ 10,000 ಕಾರ್ಯಕರ್ತರು ದೇಶಾದ್ಯಂತ ಮನೆಮನೆಗೂ ಹೋಗಿ ಸಂಗ್ರಹಿಸಿದ ಮಾಹಿತಿಗಳನ್ನಾಧರಿಸಿದ ವರದಿಯೂ ಈ ಪುಸ್ತಕದಲ್ಲಿದೆ.

'ಸಮಕಾಲೀನ ಭಾರತದಲ್ಲಿ ವರದಕ್ಷಿಣೆ ಪದ್ಧತಿ'ಯನ್ನು ಕುರಿತ ರಜನಿ ಪಲ್ರೀವಾಲ್‌ರವರ ಲೇಖನವು ಈ ಸಂಸ್ಥೆಯ ಹಲವಾರು ಆಯಾಮಗಳನ್ನು ಕುರಿತು ಚರ್ಚಿಸುತ್ತದೆ. ವರದಕ್ಷಿಣೆ ಪದ್ಧತಿಯು ಚಾರಿತ್ರಿಕ ಬೆಳವಣಿಗೆಯನ್ನು ಗುರುತಿಸುತ್ತಾ ಅದರ ವಿರುದ್ಧದ ಚಳುವಳಿಯು ಹೇಗೆ ಮಹಿಳೆಯ ಮೇಲಿನ ಹಿಂಸೆಯ ಸ್ವರೂಪವನ್ನು ಪ್ರಕಟಪಡಿಸಿತು ಎನ್ನುವುದನ್ನು ಗುರುತಿಸುತ್ತಾರೆ. ಕಾಲದಗತಿಯಲ್ಲಿ ಈ ಪದ್ಧತಿಯು ಹೊಂದಿದ ರೂಪಾಂತರದ ಪ್ರಸ್ತಾಪವು ಈ ಲೇಖದಲ್ಲಿದೆ. ವರದಕ್ಷಿಣೆ ಪಿಡುಗಿಗೆ ಕಾರಣವಾದ ಆರ್ಥಿಕ, ರಾಜಕೀಯ ಮತ್ತು ಸೈದ್ಧಾಂತಿಕ ಕಾರಣಗಳನ್ನು ಅನ್ವೇಷಿಸುತ್ತಲೇ ಜಾತಿ ವ್ಯವಸ್ಥೆ, ಉದಾರೀಕರಣಗಳು ಈ ಸಮಸ್ಯೆಯನ್ನು ಕ್ಲಿಷ್ಟಗೊಳಿಸಿರುವುದನ್ನೂ ಬಿಚ್ಚಿಡುತ್ತಾರೆ.

ವರದಕ್ಷಿಣೆ ಮತ್ತು ಗಂಡುಮಗನ ಆದ್ಯತೆಯನ್ನು ನಮ್ಮ ಜಾಹೀರಾತುಗಳು ಎತ್ತಿಹಿಡಿಯುವ ಧೋರಣೆಯನ್ನು ಕಾಮಾಕ್ಷಿ ಮಲ್ಹೋತ್ರಾ ತಮ್ಮ ಲೇಖನದಲ್ಲಿ ಚರ್ಚಿಸುತ್ತಾರೆ. ವರದಕ್ಷಿಣೆ ಪಿಡುಗಿಗೆ ಸಂಬಂಧಪಟ್ಟ ಕಾನೂನಿನ ವಿವಿಧ ಆಯಾಮಗಳನ್ನು ಕೀರ್ತಿಸಿಂಗ್ ತಮ್ಮ ಲೇಖನದಲ್ಲಿ ಚರ್ಚಿಸುತ್ತಾರೆ. ಚಂದ್ರಕಲಾ ಪಾಂಡೆಯವರ ಲೇಖನದಲ್ಲಿ ಭಾರತೀಯ ಸಮಾಜದಲ್ಲಿ ಹೆಣ್ಣಿಗಿರುವ ಕೀಳುಸ್ಥಾನವು ಹೇಗೆ ವರದಕ್ಷಿಣೆ ಪದ್ಧತಿಯನ್ನು ಪೋಷಿಸಿದೆ, ಎಂದು ವಿಶದವಾಗಿ ಚರ್ಚಿಸುತ್ತಾರೆ. ಸಾಂಸ್ಕೃತಿಕ ನಂಬಿಕೆಗಳು ಮತ್ತು ಆಚರಣೆಗಳು ಮಗನ ಹುಟ್ಟಿಗೆ ನೀಡುವ ಪ್ರಾಶಸ್ತ್ಯವನ್ನು ಕುರಿತು ಚರ್ಚಿಸುತ್ತಾರೆ. ನಮ್ಮ ಶಿಕ್ಷಣದ ಪಠ್ಯಕ್ರಮದಲ್ಲಿ ಈ ಸಾಂಪ್ರದಾಯಿಕ ವಿಧಿವಿಧಾನಗಳನ್ನು 'ಹಿಂದುತ್ವ' ವಾದಿಗಳು ಸೇರಿಸಿಬಿಟ್ಟರೆ ವರದಕ್ಷಿಣೆ ಪಿಡುಗಿಗೆ ಪೋಷಿಸಿದಂತಾಗುತ್ತದೆ, ಎಂದು ಆತಂಕ ಪಡುತ್ತಾರೆ.

ಕರ್ನಾಟಕದಲ್ಲಿ ವರದಕ್ಷಿಣೆ ಪಿಡುಗಿನಿಂದಾಗಿ ತಂದೆತಾಯಿಗಳಲ್ಲಿ ಹೆಚ್ಚುತ್ತಿರುವ ಸಾಲ ಮತ್ತು ನಂತರದ ಪರಿಣಾಮಗಳನ್ನು ಈ ಪುಸ್ತಕದಲ್ಲಿ ಚರ್ಚಿಸಲಾಗಿದೆ. ಕೇರಳದಲ್ಲಿ ಈ ಪಿಡುಗಿನಿಂದಾಗಿ ಅವಿವಾಹಿತ ಮಹಿಳೆಯರ ಸಂಖ್ಯೆ ಹೆಚ್ಚುತ್ತಿರುವುದನ್ನು ಗುರ್ತಿಸಲಾಗಿದೆ. ವರದಕ್ಷಿಣೆಯನ್ನುವುದು 'ನಿತ್ಯಸಾಯುವ ಕ್ರಿಯೆ' ಎನ್ನುತ್ತದೆ ತಮಿಳುನಾಡು ಮಹಿಳೆಯರ ಅನುಭವ. ಆಂಧ್ರಪ್ರದೇದಲ್ಲಿ ಸರ್ಕಾರದ ಉದಾರೀಕರಣದ ನೀತಿ ವರದಕ್ಷಿಣೆಯ ಪದ್ಧತಿಯನ್ನು ಪೋಷಿಸಿ ಬೆಂಬಲಿಸಿದೆ, ಎಂಬ ಅಂಶವನ್ನು ಇಲ್ಲಿನ ಲೇಖನ ಗುರುತಿಸುತ್ತದೆ. 'ವರದಕ್ಷಿಣೆಯಿಲ್ಲದೆ ಮದುವೆಯೇ ಸಾಧ್ಯವಿಲ್ಲ' ಎಂಬುದು ಗುಜರಾತಿನ ಹೆಣ್ಣು ಮಕ್ಕಳ ಅನುಭವವಾದರೆ, 'ದಿಯಾಜ್'ನಿಂದ 'ದಹೇಜ್'ವರೆಗೆ ಸಾಂಸ್ಕೃತಿಕ ಆಚರಣೆಗಳು ಹೇಗೆ ಬದಲಾಗಿವೆ, ಎಂಬುದನ್ನು ಮಹಾರಾಷ್ಟ್ರದ ಅನುಭವ ಸ್ಪಷ್ಟಪಡಿಸಿದರೆ, ಮಧ್ಯಪ್ರದೇಶದಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿಯ ಹಕ್ಕು ಇಲ್ಲದಿರುವುದೇ ವರದಕ್ಷಿಣೆಗೆ ಕಾರಣವೆಂದು ಹೇಳಲಾಗುತ್ತದೆ. ವರದಕ್ಷಿಣೆಯಿಂದ ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಹರಿಯಾಣದ ಗಂಡಿನ ಆಸೆಯಾದರೆ, ದೆಹಲಿಯೇ ಈ ಎಲ್ಲಾ ಅನುಭವಗಳ ಕೇಂದ್ರ ಬಿಂದು.

ಆದಿವಾಸಿ ಬುಡಕಟ್ಟಿನ ಜನರಲ್ಲಿ ಈ ಪದ್ಧತಿ ಕಾಣಸಿಗದಿರುವುದು ಮತ್ತು ಹಿಮಾಚಲ ಪ್ರದೇಶದಲ್ಲಿ ಅದು ಇತ್ತೀಚಿನ ಬೆಳವಣಿಗೆಯಾಗಿದೆಯೆಂಬುದು ಗಮನಿಸಬೇಕಾದ ಅಂಶ.

ದೆಹಲಿ, ಮಹಾರಾಷ್ಟ್ರ, ಕರ್ನಾಟಕ, ಆಂಧ್ರ, ಗುಜರಾತ್, ಹರಿಯಾಣ, ತಮಿಳುನಾಡು, ಹಿಮಾಚಲ - ಮುಂತಾದ ರಾಜ್ಯಗಳಲ್ಲಿ ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತರು ಕ್ಷೇತ್ರ ಕಾರ್ಯನಡೆಸಿ ಸಿದ್ಧಗೊಳಿಸಿ ವರದಿಯನ್ನಾಧರಿಸಿದ ಲೇಖನಗಳು ಈ ಪುಸ್ತಕದಲ್ಲಿ ಸೇರಿದೆ.

'ವರಕ್ಷಿಣೆ' ಪದ್ಧತಿಯ ಎಲ್ಲ ಆಯಾಮಗಳನ್ನು ಚರ್ಚಿಸುವ ಈ ಪುಸ್ತಕ ಸಂಗ್ರಹಯೋಗ್ಯವಾದುದು

- ಅಚಲ

ದಲಿತ ಮಹಿಳೆ : ಬದಲಾವಣೆಯ ಹಾದಿಯಲ್ಲಿ

- ದೇವಿಕಾ ಡಿ. ನಗರಕರ

ಮಾನವ ವಿಕಾಸ ಚರಿತ್ರೆಯನ್ನು ಗಮನಿಸಿದರೆ ಹೆಣ್ಣು - ಗಂಡಿನ ನಡುವೆ ಅನೇಕ ಸಂಘರ್ಷಗಳು ನಡೆದಿರುವುದು ಕಾಣುತ್ತದೆ. ನಾಗರಿಕ ಸಮಾಜ ರೂಢಿಗೆ ಬರುವ ಪೂರ್ವದಲ್ಲಿ ಮಹಿಳೆಯ ಮೇಲೆ ಯಾವ ಕಟ್ಟುಪಾಡುಗಳೂ ಇರಲಿಲ್ಲ; ಗಂಡಿಗೂ ಯಾವ ವಿಶೇಷವಾದ ಹಕ್ಕು, ಅಧಿಕಾರಗಳೂ ಇರಲಿಲ್ಲ. ಸ್ವತಃ ಶ್ರಮಪಟ್ಟು ಆಹಾರ ಸಂಗ್ರಹಣೆ ಮಾಡಿ ಬದುಕಬೇಕಾದ ಆ ಕಾಲದಲ್ಲಿ ಪುರುಷನಂತೆ ಮಹಿಳೆಯೂ ಬೇಟೆ, ಕ್ರೀಡೆ, ವಿನೋದಗಳಲ್ಲಿ ಭಾಗಿಯಾಗುತ್ತಿದ್ದಳು. ಮುಂದೆ ವ್ಯವಸಾಯ ಪದ್ಧತಿ ಶೋಧಿತವಾದಾಗಲೂ ಕುಟುಂಬದಲ್ಲಿ, ಸಮಾಜದಲ್ಲಿ, ಮಹಿಳೆಯ ಸ್ಥಾನಮಾನಗಳು ಸಾಕಷ್ಟು ಉನ್ನತವಾಗಿದ್ದವು. ಆದರೆ ಕಾಲಕ್ರಮೇಣ ಖಾಸಗಿ ಆಸ್ತಿ ಹಾಗೂ ಅದರ ಒಡೆತನಗಳ ಕಲ್ಪನೆ ಬೆಳೆದಂತೆ ಪುರುಷನು ಮಹಿಳೆಯ ಮೇಲೆ ನಿಯಂತ್ರಣ ಸಾಧಿಸಿದಂತೆ ತೋರುತ್ತದೆ. ಮಹಾಮೇಧಾವಿ ಆಗಸ್ಟ್ ಬೆಬೆಲ್ ''ಮಹಿಳೆ : ಭೂತ, ವರ್ತಮಾನ ಮತ್ತು ಭವಿಷ್ಯ'' ಎಂಬ ತನ್ನ ಕೃತಿಯಲ್ಲಿ ಹೇಳಿರುವಂತೆ ಮಹಿಳೆ ಬಂಧನಕ್ಕೊಳಗಾದ ಪ್ರಪಂಚದ ಮೊದಲ ಮಾನವಜೀವಿ. ಪುರುಷ ಗುಲಾಮ ಅಸ್ತಿತ್ವಕ್ಕೆ ಬರುವುದಕ್ಕಿಂತ ಮುಂಚೆಯೇ ಅವಳು ಗುಲಾಮಗಿರಿಗೆ ಬಲಿಯಾಗಿದ್ದಳು !

ಒಟ್ಟು ಜನಸಂಖ್ಯೆಯಲ್ಲಿ ಪ್ರತಿಶತ ಐವತ್ತರಷ್ಟು ಮಹಿಳೆಯರಿದ್ದರೂ ಬಹುಪಾಲು ಪ್ರದೇಶಗಳಲ್ಲಿ ಅವಳನ್ನು ಗುಲಾಮಳಂತೆ ನಡೆಸಿಕೊಳ್ಳಲಾಗಿದೆ. ಮಹಿಳೆಯೂ ಸಮಾಜ ಜೀವಿಯಾದುದರಿಂದ ಕಾಲದಿಂದ ಕಾಲಕ್ಕೆ ಬದುಕಿನಲ್ಲಿ ಉಂಟಾದ ಬದಲಾವಣೆಗಳು ಅವಳ ವ್ಯಕ್ತಿತ್ವದ ಮೇಲೆ ಗಂಭೀರ ಪರಿಣಾಮವನ್ನುಂಟುಮಾಡಿದವು. ದೈಹಿಕ ಸಾಮರ್ಥ್ಯ, ಬುದ್ಧಿಮತ್ತೆ, ಚಿಂತಶೀಲತೆಗಳಲ್ಲಿ ಪುರುಷನಿಗಿಂತ ಮಹಿಳೆ ಏನೇನೂ ಕಡಿಮೆಯಿಲ್ಲವೆಂಬುದು ಸಾಬೀತಾಗಿದೆ. ಆದರೆ ಒಂದು ಮಾತು ನಿಜ ; ಮಹಿಳೆಯನ್ನು ಸಾರ್ವಜನಿಕ ಜೀವನದಲ್ಲಿ ಪುರುಷನಿಗೆ ಸಮಾನಾಗಿ ಪ್ರೋತ್ಸಾಹಿಸಿದ ಸಮಾಜವಾದಿ ರಾಷ್ಟ್ರಗಳಲ್ಲಿ ಮಾತ್ರ ಇಂತಹ ಸರ್ವತೋಮುಖ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿದೆ. ಸೋವಿಯತ್ ರಷ್ಯಾ, ಚೀನಾ, ವಿಯಟ್ನಾಂ, ಕ್ಯೂಬಾಗಳಲ್ಲಿ ಮಹಿಳೆ ಸಾಧಿಸಿರುವ ಅದ್ಭುತ ಯಶಸ್ಸು ಆ ದೇಶಗಳ ಮುನ್ನಡೆಗೆ ಕಾರಣವಾಯಿತು. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಆಕೆಯನ್ನು ಪುರುಷನ ನಂತರದ ಸ್ಥಾನದಲ್ಲಿಟ್ಟು ಭೋಗದ ವಸ್ತುವಾಗಿ ನಡೆಸಿಕೊಳ್ಳಲಾಗುತ್ತದೆ. ವಿಶ್ವಸುಂದರಿ ಸ್ಪರ್ಧೆಗಳನ್ನು ನಡೆಸುವವರು ಬಂಡವಾಳಶಾಹಿಗಳೇ !

ಭಾರತದಲ್ಲಿ ಮಹಿಳೆ

ಇಂದಿಗೂ ಬುಡಕಟ್ಟು ಜನಾಂಗಗಳಲ್ಲಿ ಮಾತೃಪ್ರಧಾನ ಕುಟುಂಬಗಳಿವೆ. ಬೇರೆಡೆಗಳಲ್ಲೂ ಹಾಗಿದ್ದುದು ಕಾಲಾಂತರದಲ್ಲಿ ತಿರುವು ಮುರುವು ಆಗಿ ಪಿತೃಪ್ರಧಾನ ವ್ಯವಸ್ಥೆ, ಸಮಾಜದಲ್ಲಿ ನೆಲೆಯೂರಿ ಮಹಿಳೆ ಪ್ರಪಾತಕ್ಕೆ ತಳ್ಳಲ್ಪಟ್ಟರು. ಸಾಮಾಜಿಕ ನಿಯಮಗಳನ್ನು ಜಾತಿ ವ್ಯವಸ್ಥೆಯ ಮೇಲೆ ವ್ಯಾಖ್ಯಾನಗೊಳಿಸಿದ ಮನು ಮಹಿಳೆಗೆ ಸ್ವತಂತ್ರ ಅಸ್ತಿತ್ವವನ್ನು ನಿರಾಕರಿಸಿದ. ನಮ್ಮ ಇತಿಹಾಸ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಗ್ರಂಥಗಳಲ್ಲಿ ನಾವು ಮಹಿಳೆಯನ್ನು ಹೇಗೆ ನಡೆಸಿಕೊಂಡಿದ್ದೇವೆ ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಗಳಾಗಿ ಕೆಲವು ರೋಚಕ ಪ್ರಸಂಗಗಳಿವೆ. ಸಮಾಜದಲ್ಲಿ ಜಾತಿ ವ್ಯವಸ್ಥೆ ಜಾರಿಗೆ ಬಂದಮೇಲೆ ಮಹಿಳೆಯ ಮೇಲಿನ ಕಟ್ಟುಪಾಡುಗಳು ಇನ್ನಷ್ಟು ಬಿಗಿಗೊಂಡವು. ಆಕೆಗೆ ಶಿಕ್ಷಣವನ್ನು ನಿರಾಕರಿಸಲಾಯಿತು. ಆಸ್ತಿಯ ಹಕ್ಕು, ತಾಯ್ತನದ ಹಕ್ಕು, ಎಲ್ಲವೂ ಪುರುಷನ ಅಧೀನಕ್ಕೊಳಪಟ್ಟು ಮಹಿಳೆ ಸಂಪೂರ್ಣವಾಗಿ ಪುರುಷಾವಲಂಬಿಯಾದಳು.

ದಲಿತ ಮಹಿಳೆ

ದಲಿತ ಮಹಿಳೆಯ ಬದಲಾವಣೆಯ ದಾರಿ ಕಂಡುಕೊಳ್ಳಬೇಕಾದರೆ ದಲಿತ ಮಹಿಳೆಯನ್ನು ಸುತ್ತುವರೆದಿರುವ ಸಮಸ್ಯೆಗಳನ್ನು ಅರಿಯಬೇಕಾಗುವುದು. ಈ ದೇಶದಲ್ಲಿ ಆರ್ಥಿಕವಾಗಿ ಹಿಂದುಳಿದವರೆಲ್ಲರೂ ದಲಿತರೆ. ಆದರೆ ಜಾತಿಯಿಂದ ಹಿಂದುಳಿದವರೆಲ್ಲರೂ, ಆರ್ಥಿಕವಾಗಿ ಅಷ್ಟೇ ಅಲ್ಲ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ತೀರ ಉಪೇಕ್ಷೆಗೆ ಒಳಗಾದವರು. ಹೀಗಾಗಿ ದಲಿತರ ಸಮಸ್ಯೆಯನ್ನು ನೋಡಿದಾಗ ಜಾತಿಯಿಂದ ಹಿಂದುಳಿದವರೇ ನಾನಾ ರೀತಿಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆಂಬುದು ಹೆಚ್ಚು ಸ್ಪಷ್ಟವಾಗುತ್ತದೆ.

ದಲಿತ ಮಹಿಳೆ ದಲಿತರ ಎಲ್ಲಾ ಸಮಸ್ಯೆಗಳಿಗೆ ವಾರಸುದಾರಳು. ಜಾತಿವ್ಯವಸ್ಥೆಯೆಂಬುದು ಮಾನವ ಸಂಬಂಧಗಳಿಗೆ ತಡೆ ಗೋಡೆಗಳನ್ನು ನಿರ್ಮಿಸಿದುದರ ಪರಿಣಾಮವಾಗಿ ಇಡೀ ಸಾಮಾಜಿಕ ವ್ಯವಸ್ಥೆಯು ಕುಸಿದುಹೋಯಿತು. ಮೇಲುಜಾತಿಯ ಜನಗಳು ಸ್ವಜಾತಿಯ ಮಹಿಳೆಯನ್ನು ಬಂಧಿಯಾಗಿಸಿಕೊಂಡುದಷ್ಟೇ ಅಲ್ಲ, ತಮ್ಮ ಹೆಚ್ಚಿನ ತೆವಲುಗಳಿಗೆ ಕೆಳಜಾತಿಯ ಹೆಣ್ಣು ಮಕ್ಕಳನ್ನು ಬಲಿಪಶುವಾಗಿಸಿದರು. ಇಂದಿಗೂ ಆಚರಣೆಯಲ್ಲಿ ಬೆಳೆದುಕೊಂಡು ಬಂದಿರುವ ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಓಕುಳಿಯಾಟ, ಮುಂತಾದ ಆಚರಣೆಗಳಿಗೆ ಧಾರ್ಮಿಕ ಹಿನ್ನೆಲೆ

ಇದ್ದಿರಬಹುದಾದರೂ ಇವೆಲ್ಲವುಗಳನ್ನು ಮೇಲುಜಾತಿಯ ಗಂಡಸರು ತಮ್ಮ ಲೈಂಗಿಕಾಸಕ್ತಿಗೆ ಹೊಂದಿಸಿಕೊಂಡರು. ದೇವದಾಸಿ ಪದ್ಧತಿಯಲ್ಲಿ ದೇವರಿಗೆ ತಾನು ದಾಸಿಯೆನಿಸಿಕೊಂಡು ಅಡಲಿಗೆ ಹೊತ್ತು ಭಿಕ್ಷೆಬೇಡಿ ಬದುಕುವುದು ರೂಢಿಯಲ್ಲಿರಬಹುದು. ಆದರೆ ಹೆಣ್ಣಿನ ವಿಷಯದಲ್ಲಿ ಇದು ಎಷ್ಟೊಂದು ಅಮಾನುಷ ಪದ್ಧತಿಯಾಗಿ ಮಾರ್ಪಟ್ಟಿದೆಯೆಂದರೆ ದೇವದಾಸಿ ಪದ್ಧತಿಯನ್ನು ಕೆಳಜಾತಿ ಹೆಣ್ಣು ಮಕ್ಕಳಿಗೆ ಕಡ್ಡಾಯ ಮಾಡಲಪಟ್ಟಿತು. ಇದರಿಂದ ಆ ಹೆಣ್ಣು ಮದುವೆಯಾಗುವಂತಿರಲಿಲ್ಲ. ಅಷ್ಟೇ ಅಲ್ಲ, ಇಚ್ಚಿಸಿದ ಗಂಡಸರಿಗೆಲ್ಲ ಚಕಾರ ಎತ್ತದೆ ಮೈಯೊಪ್ಪಿಸಬೇಕು. ಇಂತಹ ಅಮಾನುಷ ಲೈಂಗಿಕ ಆಕ್ರಮಣಕ್ಕೆ ಸಿಕ್ಕು ಎಳೆಹರೆಯದ ದಲಿತ ಹೆಣ್ಣುಗಳು ಹಲವಾರು ಲೈಂಗಿಕ ವ್ಯಾಧಿಗಳಿಗೆ ತುತ್ತಾಗಿ ಸಾವನ್ನಪ್ಪುತ್ತಿದ್ದಾರೆ. ಇತಿಹಾಸ ಪ್ರಸಿದ್ಧವಾದ ಬಿಜಾಪುರ ಜಿಲ್ಲೆಯಲ್ಲಿಯೇ ಹದಿನಾಲ್ಕು ಸಾವಿರ ವೇಶ್ಯೆಯರಿದ್ದಾರೆಂದರೆ ಇದು ಒಂದು ಇತಿಹಾಸವೆ ! ಹೆಣ್ಣನ್ನು ತಮ್ಮ ಲೈಂಗಿಕ ಸುಖಕ್ಕೆ ಧಾರಾಳವಾಗಿ ಬಳಸಿಕೊಳ್ಳುತ್ತಿದ್ದ ಮೇಲುಜಾತಿ ಗಂಡಸರು ಮುಂದೆ ಒದಗುತ್ತಿದ್ದ ಯಾವುದೇ ಪರಿಣಾಮಗಳಿಗೆ ಜವಾಬ್ದಾರಿ ಹೊರುತ್ತಿರಲಿಲ್ಲ. ದೇವದಾಸಿಯರಲ್ಲಿ ಹುಟ್ಟುವ ಸಂತತಿಯೆಲ್ಲ ತಂದೆಯಿಲ್ಲದೆ ತಬ್ಬಲಿಯಾಗುತ್ತಿತ್ತು. ಪಿತೃಪ್ರಧಾನತೆಯನ್ನು ಒಪ್ಪಿಕೊಂಡ ಸಮಾಜದಲ್ಲಿ ಹೀಗೆ ತಂದೆಯಿಲ್ಲದ ಮಕ್ಕಳನ್ನು ಹೀನಾಯವಾಗಿ ನೋಡಲಾಗುತ್ತಿತ್ತು. ಮೊದಲೇ ಗಂಡಿನ ಆಶ್ರಯವಿಲ್ಲದೆ ಬದುಕುವುದು ಕಷ್ಟವಾಗಿರುವ ಪರಿಸ್ಥಿತಿಯಲ್ಲಿ ದಲಿತ ಮಹಿಳೆ ಆರ್ಥಿಕವಾಗಿ ಅಭದ್ರಳಾಗಿ, ಅನಕ್ಷರಸ್ಥಳಾಗಿ ತನ್ನ ಕುಟುಂಬದ ಸಮಸ್ತ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.

ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಹನುಮಂತ ದೇವರಿಗೆ ಓಕುಳಿಯಾಟ ಸೇವೆ ಮಾಡುವುದು ರೂಢಿಯಲ್ಲಿದೆ. ಕೆಳಜಾತಿಯ ಹೆಣ್ಣುಮಕ್ಕಳನ್ನು ದೇವಸ್ಥಾನದ ಅಂಗಳದಲ್ಲಿ ನಿಲ್ಲಿಸಿ ಮೇಲುಜಾತಿಯ ಗಂಡಸರು ಸುತ್ತುಕಡೆಯಿಂದ ಓಕುಳಿಗೊಚ್ಚುತ್ತಾರೆ. ಓಕುಳಿಯ ನೀರಿನಿಂದ ಮೈಯೆಲ್ಲ ತೊಯ್ದು ಉಟ್ಟಬಟ್ಟೆ ಮೈಗಂಟಿ ಇಡಿಯಾಗಿ ದೇಹ ಉಬ್ಬುತಗ್ಗುಗಳಲ್ಲಿ ಹೊರಕಾಣುವುದನ್ನು ನೋಡಿ ಸುತ್ತಣ ಜನ ಹರ್ಷೋದ್ಗಾರ ಮಾಡುತ್ತಾರೆ. ಓಕುಳಿ ಚೆಲ್ಲಿದ ಜನಗಳಿಗೆ ನೆಪಕ್ಕೆ ಹುಣಸೆಬರಲಿನಿಂದ ಹೊಡೆಯುವುದರಲ್ಲಿ ಹೆಣ್ಣುಮಕ್ಕಳು ಸಮಾಧಾನ ಕಾಣಬೇಕು ! ಈ ಕಾರ್ಯಕ್ಕಾಗಿ ದಲಿತ ಹೆಣ್ಣು ಮಕ್ಕಳಿಗೆ ಇಂತಿಷ್ಟು ಎಂದು ಧನಸಹಾಯ ಮಾಡಲಾಗುತ್ತದೆ. ಊರ ಬೇರೆ ಹೆಣ್ಣು ಮಕ್ಕಳೆಲ್ಲ ಅವರವರ ಗಂಡಂದಿರ ಜೊತೆ ಮಾನವಾಗಿ ಬದುಕುತ್ತಿರುವಾಗ ದಲಿತ ಹೆಣ್ಣು ಮಕ್ಕಳು ಮೌನವಾಗಿ ಈ ಯಾತನೆಯನ್ನು ಅನುಭವಿಸುತ್ತಾರೆ !

ಅನಾದಿಕಾಲದಿಂದಲೂ ಉಗ್ರದೇವತೆಗಳಿಗೆ ಕುರಿ ಕೋಳಿಗಳನ್ನು ಬಲಿಕೊಡುವ ಪದ್ಧತಿ ನಮ್ಮಲ್ಲಿದೆ. ಆನೆ ಕುದುರೆಗಳ ಬಲಿ ಯಾರೂ ಕೊಟ್ಟಿಲ್ಲ, ಕೊಡುವುದೂ ಇಲ್ಲ. ತೀರ ಹಿಂದುಳಿದ ಅಸಹಾಯಕ ಹೆಣ್ಣು ಮಕ್ಕಳೇ ಕುರಿ-ಕೋಳಿಗಳಾಗಿದ್ದಾರೆ. ಇವರ ನೋವಿಗೆ ಕೊನೆಯಿಲ್ಲವೇ? ಮಹಿಳಾ ಜಾಗೃತಿಯ ಬಗ್ಗೆ, ಸಮಾನತೆಯ ಹಕ್ಕು ಸೌಲಭ್ಯಗಳ ಬಗ್ಗೆ ಭಾಷಣ ಬಿಗಿಯುತ್ತಿದ್ದರೂ, ಕಾಯ್ದೆ ಪಾಸು ಮಾಡುತ್ತಿದ್ದರೂ, ಲೇಖನ ಬರೆಯುತ್ತಿದ್ದರೂ, ನಗರ ಪ್ರದೇಶದಲ್ಲಿ ವಾಸಿಸುವ ಸುಶಿಕ್ಷಿತ ದಲಿತ ಮಹಿಳೆ ಸಹ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ವರ್ಷದಿಂದ ವರ್ಷಕ್ಕೆ ದೌರ್ಜನ್ಯದ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ನಡೆದಿದೆ. ಇನ್ನು ಅತ್ಯಾಚಾರ, ಲೈಂಗಿಕ ಕಿರುಕುಳಗಳ ಸಂಖ್ಯೆಗೇನೂ ಮಿತಿಯಿಲ್ಲ. ಇದಕ್ಕೆ ಕಾರಣ ಸ್ತ್ರೀಯ ಅಸಹಾಯಕತೆ; ಅಥವಾ ಗಂಡಸರ ಮೋಹಕ ಮಾತಿಗೆ ಮರುಳಾಗಿ ಈ ರೀತಿ ಬಲಿಪಶುವಾಗುತ್ತಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಬರುವ ಶರಣೆ ರೇವಮ್ಮ ಬಹಳ ಮಾರ್ಮಿಕವಾದ ಮಾತೊಂದನ್ನು ಹೇಳಿದ್ದಾಳೆ :

"ಶಕ್ತಿಯುಳ್ಳಡೆ ಸಂಹಾರವ ಮಾಡುವದು, ಶಕ್ತಿಯಿಲ್ಲದಿದ್ದರೆ ಕಣ್ಣು ಕರ್ಣವ ಮುಚ್ಚಿಕೊಂಡು ಶಿವಮಂತ್ರವ ಜಪಿಸುವುದು" ಎನ್ನುತ್ತಾಳೆ. ಕಣ್ಣು ಕಿವಿ ಮುಚ್ಚಿಕೊಂಡು ಶಿವಮಂತ್ರ ಜಪಿಸುವ ಕಾಲ ಇದಲ್ಲ; ಇಂದಿನ ದಲಿತ ಮಹಿಳೆ ಕಾಳಿ, ದುರ್ಗಿಯರಂತೆ ಶಕ್ತಿ ದೇವತೆಯಾದಾಗ ಮಾತ್ರ ಅವಳು ಸಮಾಜದಲ್ಲಿ ಸ್ವತಂತ್ರವಾಗಿ ಬದುಕಲು ಸಾಧ್ಯವಿದೆ.

ಇನ್ನೊಂದು ವಿಷಾದ ಸಂಗತಿ ಎಂದರೆ ಸುಶಿಕ್ಷಿತ ದಲಿತ ಮಹಿಳೆ ತಾನೊಬ್ಬಳು ಸುಶಿಕ್ಷಿತಳಾದ ಮಾತ್ರಕ್ಕೆ ಅಥವಾ ಸಮಾಜದಲ್ಲಿ ಒಂದು ಗಣ್ಯಸ್ಥಾನವನ್ನು ಪಡೆದ ಮಾತ್ರಕ್ಕೆ ತನ್ನ ಜವಾಬ್ದಾರಿ ಮುಗಿಯಲಿಲ್ಲ ಎಂಬುದನ್ನು ಅರಿಯುತ್ತಿಲ್ಲ. ತನ್ನಂತೆ ಇರುವ ಇತರ ದಲಿತ ಮಹಿಳೆಯರ ಸಮಸ್ಯೆಗಳನ್ನು ಅರಿತುಕೊಂಡು ಅವರ ಕಷ್ಟಸುಖದಲ್ಲಿ ಭಾಗಿಯಾದರೆ ಮಾತ್ರ ಅವರ ಬಾಳು ಸಾರ್ಥಕವಾಗುತ್ತದೆ.

ಈ ಮಹಿಳಾ ಹೋರಾಟ ಕೇವಲ ಪುರುಷರ ವಿರುದ್ಧದ ಹೋರಾಟವಾಗಿರದೆ ಸಮಾಜದ ಶೋಷಣಾತ್ಮಕ ವ್ಯವಸ್ಥೆಯ ವಿರುದ್ಧದ ಹೋರಾಟವಾಗಬೇಕು. ಎಲ್ಲೋ ಅಲ್ಲೊಂದು ಇಲ್ಲೊಂದು ಸ್ತ್ರೀ ಪರಹೋರಾಟದ ಮಹಿಳಾ ಸಂಘಟನೆಗಳು ಇದ್ದರೂ ಸಹ, ಅವು ಮೇಲ್ಜಾತಿಯವರಿಗೆ ಮಾತ್ರ ಮೀಸಲಾಗಿವೆ. ಅತ್ಯಂತ ಶ್ರೀಮಂತ ವರ್ಗದ ಮತ್ತು ಮಧ್ಯಮ ವರ್ಗದ ಮಹಿಳಾ ಮಣಿಗಳ 'ಟೈಂ ಪಾಸ್' ಸಲುವಾಗಿ ಇಂತಹ ಕೆಲವು ಸಂಘಗಳು ತಲೆ ಎತ್ತಿವೆ ಎಂದರೆ ಆಶ್ಚರ್ಯಪಡಬೇಕಾಗಿಲ್ಲ. ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟ ಅತ್ಯಂತ ಕೆಳವರ್ಗದ ಮಹಿಳೆಯರ ಬಗ್ಗೆ ಇವರು ಮಾಡಿದ ಸಾಧನೆ ಶೂನ್ಯವೆಂದೇ ತೋರುತ್ತದೆ.

ದಲಿತ ಮಹಿಳೆಯರ ಅಭಿವೃದ್ಧಿಗಾಗಿ ಸರಕಾರ ಕೆಲವೊಂದು ಯೋಜನೆಗನ್ನು ಹಾಕಿಕೊಂಡಿದ್ದರೂ ಆ ಯೋಜನೆಗಳ

ಲಾಭವನ್ನು ಪಡೆದುಕೊಂಡವರು ಎಷ್ಟು ಜನ? ಅಲ್ಲದೆ ಆ ಯೋಜನೆಗಳು ಅವರ ಮನೆಬಾಗಿಲು ತಲುಪಿವೆಯೇ?

> ಬೆತ್ತಲೆ ಸೇವೆಯು ದಲಿತ ಮಹಿಳೆಯರ ನಡುವಿನ ಮತ್ತೊಂದು ಅಮಾನುಷ ಆಚರಣೆಯಾಗಿದೆ. ಹೆಣ್ಣಿನ ಅಂಗಾಂಗಗಳ ಸವಿ ನೋಡುವ ಇಚ್ಛೆಯಿಂದ ಮೇಲುಜಾತಿಯ ಜನಾಂಗಗಳಿಂದ ನಿರ್ದೇಶಿತವಾಗಿರುವ ಈ ಪದ್ಧತಿ ಇಂದಿಗೂ ಚಲಾವಣೆಯಲ್ಲಿದೆ. ಶಿವಮೊಗ್ಗೆಯ ಚಂದ್ರಗುತ್ತಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಬೆತ್ತಲೆ ಸೇವೆ, ಉಚಿಗಿ ಉಡುವುದರ (ಬಟ್ಟೆಗೆ ಬದಲಾಗಿ ಮರದ ತೊಪ್ಪಲನ್ನು ಧರಿಸುವುದು) ಮೂಲಕ ದೇವರಿಗೆ ಹರಕೆ ಸಲ್ಲಿಸುವ ಪದ್ಧತಿ ಇದೆ. ಇದೆಲ್ಲ ದೇವರು ಮತ್ತು ಧರ್ಮದ ಹೆಸರಿನಲ್ಲಿ ನಡೆಯುವುದರಿಂದ ಅನಕ್ಷರಸ್ಥ ಮಹಿಳೆ ಇದರ ಮರ್ಮವನ್ನು ಗುರುತಿಸಲಾರಳು. ಅಷ್ಟೇ ಅಲ್ಲ, ಇದಕ್ಕೆ ಮೌನವಾಗಿ ಒಪ್ಪಿ ಅನುಕರಣೆ ಮಾಡುವುದನ್ನು ಬಿಟ್ಟರೆ ಅವಳಿಗೆ ಬೇರೆ ದಾರಿಯೇ ತೋಚದ ಸ್ಥಿತಿಯಲ್ಲಿದ್ದಾಳೆ.

ನಮ್ಮಲ್ಲಿ ಮಹಿಳಾ ಸಂಘಗಳು ಇವೆ. ಆದರೆ ಸಂಘಟನೆ ಎಲ್ಲಿದೆ? ದಲಿತ ಮತ್ತು ರೈತ ಮಹಿಳೆಯರನ್ನೊಳಗೊಂಡಂತೆ 1986ರಲ್ಲಿ ಮಹಾರಾಷ್ಟ್ರದ ಚಾಂದವಾಡದಲ್ಲಿ ಮಹಿಳಾ ಚಳುವಳಿ ನಡೆಯಿತು. 1989ರ ಹೊತ್ತಿಗೆ ಈ ಮಹಿಳಾ ಸಂಘಟನೆಯು ಉನ್ನತಿಯ ಹಂತ ತಲುಪಿತು. ಹಳ್ಳಿಯ ಸಾರಾಯಿ ಅಂಗಡಿಗಳ ವಿರುದ್ಧ ಆಂದೋಲನ ಕೈಗೊಂಡದ್ದಲ್ಲದೆ ಮಹಿಳೆಯ ಆಸ್ತಿಯ ಹಕ್ಕು ಮತ್ತು ಮತೀಯವಾದದ ಬಗ್ಗೆ ಹೆಚ್ಚು ಗಮನ ಹರಿಸಿದ್ದಿತು. ಹಲವಾರು ಕಡೆಯೂ ಆಗಿರಲಿಕ್ಕೆ ಸಾಕು.

ದಲಿತ ಮಹಿಳೆಯರು ಎಂದರೆ ಇನ್ನೊಬ್ಬರ ದೈಹಿಕ ತೃಷೆಯನ್ನು ಹಿಂಗಿಸುವುದಕ್ಕಾಗಿಯೇ ಹುಟ್ಟಿಬಂದವರು ಎಂಬ ಹೀನ ಪರಿಕಲ್ಪನೆ ನಮ್ಮ ಸಮಾಜದಲ್ಲಿದೆ. ಅದಕ್ಕೆ ಇಂದಿನ ದಲಿತ ಮಹಿಳೆ ಸುಶಿಕ್ಷಿತಳೇ ಇರಲಿ ಅಶಿಕ್ಷಿತಳೇ ಇರಲಿ ನೈತಿಕತೆಯನ್ನೇ ಒಂದು ಸವಾಲಾಗಿ ಸ್ವೀಕರಿಸಬೇಕಾಗಿದೆ. ಇಂದಿನ ದಲಿತ ಮಹಿಳೆ ಜಾಗೃತಳಾಗಿ ದಲಿತ ಸಂಘಗಳನ್ನು ಕಟ್ಟಿಕೊಂಡರೆ ಹೆಚ್ಚು ಅರ್ಥಪೂರ್ಣ. ಒಬ್ಬ ಸವರ್ಣೀಯನು ಪಂಚತಾರಾ ಹೊಟೇಲಿನಲ್ಲಿ ಕುಳಿತು ದಲಿತರ ಬಗ್ಗೆ ಕಾವ್ಯ ಬರೆಯುವುದಕ್ಕೂ ಒಬ್ಬ ದಲಿತನೇ ದಲಿತರ ಕುರಿತು ಕಾವ್ಯ ಬರೆಯುವುದಕ್ಕೂ ಅಂತರವಿದೆ. ಆದ್ದರಿಂದ ಇಂದಿನ ದಲಿತ ಮಹಿಳೆ ಸ್ವಪರಿವರ್ತನೆಯಾದಾಗ ಮಾತ್ರ ಜಗತ್ತು ಪರಿವರ್ತನೆಯಾಗಲು ಸಾಧ್ಯವಿದೆ.

ದಲಿತ ಮಹಿಳೆ ತಾನು ಬದಲಾವಣೆಯ ಹಾದಿ ಕಾಣಬೇಕಾದರೆ ಮೊದಲು ತನ್ನನ್ನು ಸುತ್ತುವರಿದಿರುವ ಅಜ್ಞಾನದಿಂದ ಬಿಡುಗಡೆ ಪಡೆಯಬೇಕು. ಶಿಕ್ಷಣವೊಂದೇ ಆಕೆಯ ಬಹುಪಾಲು ಸಮಸ್ಯೆಗಳಿಗೆ ಉತ್ತರವಾಗಬಲ್ಲುದು. ಆದರೆ ಇದು ಅಷ್ಟಕ್ಕೆ ನಿಲ್ಲುವುದಿಲ್ಲ. ಶಿಕ್ಷಣ ಪಡೆದುಕೊಂಡ ಮಹಿಳೆ ತನ್ನ ಸ್ಥಿತಿಯನ್ನು ಅರಿಯಲು ಮತ್ತು ವ್ಯವಸ್ಥೆ ತನ್ನ ಮೇಲೆ ಹೇರಿದ ಕಟ್ಟುಪಾಡುಗಳನ್ನು ಸಡಿಲಿಸಲು ಸಮರ್ಥಳಾಗುತ್ತಾಳೆ. ಆದರೆ ಮುಂದೆ ಆಕೆಯು ತನ್ನ ಸಾಮರ್ಥ್ಯವನ್ನು ಪ್ರಕಟಪಡಿಸಲು ಅಗತ್ಯವಾದ ಅವಕಾಶಗಳು ಲಭ್ಯವಾಗಬೇಕು. ದಲಿತರಲ್ಲಿ ಮೀಸಲಾತಿಯ ಲಾಭವೆಲ್ಲ ಮುಕ್ಕಾಲುಪಾಲು ಪುರುಷರಿಗೇ ದಕ್ಕಿದೆ. ಸಮಾಜದಲ್ಲಿ ಪುರುಷರಿಗೆ ದೊರೆಯುವುದಕ್ಕೆ ಸಮನಾದ ಅವಕಾಶಗಳು ಲಭ್ಯವಾದಾಗ ಮಾತ್ರ ಮಹಿಳೆ ಬದಲಾವಣೆಯ ಹಾದಿಯಲ್ಲಿ ಹೆಜ್ಜೆ ಇಡಲು ಸಾಧ್ಯವಿದೆ. ▲

ಸೋರುತಿಹುದು ಮನೆಯಮಾಳಿಗೆ

ಸಾಹಿತ್ಯಗೋಷ್ಠಿ - ಚರ್ಚೆ
ಅಲ್ಲಿ ಅವಳು !
ಬಂಡಾಯ - ಮೆರವಣಿಗೆ
ಅಲ್ಲಿ ಅವಳು !
ವಿಮೋಚನೆ - ಪ್ರತಿಭಟನೆ
ಅಲ್ಲಿ ಅವಳು !
ಅನ್ಯಾಯ - ಬಿರುಸಿನವಾದ
ಅಲ್ಲಿ ಅವಳು !
ಪದರ ಪದರ ಮೇಲೆ ಕುಳಿತು
ಹೃದಯದಲ್ಲಿ ಉಸಿರು ಸಿಕ್ಕು
ಮಾಂಸಖಂಡ ಹೆಪ್ಪುಗಟ್ಟಿ
ತೂಕಬೆಳೆದು ಆಕಾರಕಳೆದು
ಜನದಟ್ಟಣೆಯ
ಬೆವರ ವಾಸನೆ ಹೊಡೆದು
ಓಡಿಬಂದಳು ಎಡವುತ್ತ
ತನ್ನ ಮನೆಯಂಗಳಕೆ !
ಗುದ್ದಲಿ ಹಿಡಿದು
ಭರಭರನೆ ಮಣ್ಣು ಅಗೆದು
ನೆಟ್ಟಳು ಅಲ್ಲೊಂದು
ಪುಟ್ಟ ಸಸಿಯ....

ಸುತ್ತಲೂ ನೋಡಿದಳು
ಓಹ್ ! ಎಷ್ಟೊಂದು ನೆಲ ಪಾಳು ಬಿದ್ದಿದೆ !

- ಎಸ್. ಮಾಲತಿ
ಸಾಗರ

ಸಾಧನೆಯ ಸಂತಸದಲ್ಲಿ ಕರ್ನಾಟಕ

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲೀಕರಣ

ಕರ್ನಾಟಕ ಸರ್ಕಾರವು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರತಿಯೊಬ್ಬರಿಗೆ ದಿನವೊಂದಕ್ಕೆ 55 ಲೀಟರ್ (ಎಲ್‌ಪಿಸಿಡಿ)ಗಳಷ್ಟು ಸುರಕ್ಷಿತ ನೀರನ್ನು ಪೂರೈಸಲು ಕಂಕಣಬದ್ಧವಾಗಿದೆ.

ಒಟ್ಟು 56682 ಜನ ವಸತಿಗಳಲ್ಲಿ 31668 55 ಎಲ್‌ಪಿಸಿಡಿ ನೀರನ್ನು ಈಗಾಗಲೇ ಒದಗಿಸಲಾಗಿದೆ. ಉಳಿದ ಜನ ವಸತಿಗಳಿಗೆ ಮುಂದಿನ ಎರಡು ವರ್ಷಗಳಲ್ಲಿ ತಲಾ 55 ಲೀಟರ್ ನೀರು ಪೂರೈಕೆ.

★ ಕಳೆದ ಒಂದು ವರ್ಷದ ಅವಧಿಯಲ್ಲಿ 2600 ಕೊಳವೆ ನೀರು ಸರಬರಾಜು ಯೋಜನೆ ಹಾಗೂ ಕಿರುನೀರು ಸರಬರಾಜು ಯೋಜನೆ ಹಾಗೂ 4000 ಕೈ ಪಂಪು ಕೊಳವೆ ಬಾವಿಗಳ ಮೂಲಕ 3000ಕ್ಕೂ ಹೆಚ್ಚು ಗ್ರಾಮಗಳಿಗೆ ಕುಡಿಯುವ ನೀರು ಸೌಲಭ್ಯ.

★ ಈ ವರ್ಷ ಗ್ರಾಮೀಣ ನೀರು ಸರಬರಾಜು ಯೋಜನೆಗಾಗಿ ರೂ. 345.55 ಕೋಟಿ ಮೀಸಲು

★ ಗ್ರಾಮೀಣ ಪರಿಸರ ನೈರ್ಮಲ್ಯದ ಉದ್ದೇಶದೊಂದಿಗೆ 'ಸ್ವಚ್ಛ ಗ್ರಾಮ ಯೋಜನೆ' ಜಾರಿ. ರಸ್ತೆ ಚರಂಡಿ ಹಾಗೂ ಶೌಚಾಲಯ ಸೌಲಭ್ಯಗಳು. ಹೊಗೆರಹಿತ ಒಲೆ ಸರಬರಾಜು. ಗ್ರಾಮಗಳ ಹೊರವಲಯಗಳಿಗೆ ಗೊಬ್ಬರ ಗುಂಡಿಗಳ ಸಾಗಾಣಿಕೆ ಇವು ಈ ಯೋಜನೆಯ ಪಂಚಸೂತ್ರಗಳು. ಈ ವರ್ಷ ಒಟ್ಟು ರೂ 200 ಕೋಟಿ ಮೊತ್ತದಲ್ಲಿ 1000 ಗ್ರಾಮಗಳಲ್ಲಿ ಈ ಯೋಜನೆ ಅನುಷ್ಠಾನ.

★ ನಿರ್ಮಲ ಗ್ರಾಮ ಯೋಜನೆಯಡಿ 7.48 ಲಕ್ಷ ಗ್ರಾಮೀಣ ಕುಟುಂಬಗಳಿಗೆ ಶೌಚಾಲಯ ನಿರ್ಮಾಣಕ್ಕಾಗಿ ಸಹಾಯಧನ ನೀಡಿಕೆ.

★ ಗ್ರಾಮೀಣ ಪ್ರದೇಶಗಳಲ್ಲಿ ಕುಟುಂಬ ಶೌಚಾಲಯ ನಿರ್ಮಾಣಕ್ಕಾಗಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಕ್ಕೆ ರೂ. 2000 ಮತ್ತು ಬಡತನ ರೇಖೆಗಿಂತ ಮೇಲಿರುವ ಕುಟುಂಬಕ್ಕೆ ರೂ. 1200ಗಳ ಸಹಾಯಧನ ಸೌಲಭ್ಯ.

★ ಈ ವರ್ಷದಿಂದ ಗ್ರಾಮೀಣ ಪ್ರದೇಶಗಳ ಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸಲು ಹೊಸ ಕಾರ್ಯಕ್ರಮ.

★ ವಿಶ್ವಬ್ಯಾಂಕ್ ನೆರವಿನಿಂದ ರೂ. 447 ಕೋಟಿ ವೆಚ್ಚದಲ್ಲಿ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ. 1105 ಗ್ರಾಮಗಳಲ್ಲಿ ಅನುಷ್ಠಾನ. 923 ಗ್ರಾಮಗಳಲ್ಲಿ ಕಾಮಗಾರಿಗಳು ಪೂರ್ಣ.

★ ಗದಗ್, ಹಾವೇರಿ, ಧಾರವಾಡ, ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ 201 ಗ್ರಾಮಗಳಲ್ಲಿ 69.70 ಕೋಟಿ ವೆಚ್ಚದ ನೆದರ್‌ಲ್ಯಾಂಡ್ ನೆರವಿನ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯ ಪೂರ್ಣ.

★ ಮೈಸೂರು, ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾಯೋಗಿಕ ಸಮುದಾಯ ಆಧಾರಿತ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯ ಅನುಷ್ಠಾನ. ಇದಕ್ಕಾಗಿ ರೂ. 152 ಕೋಟಿ ಮೀಸಲು.

★ ಮುಂದಿನ 4 ವರ್ಷಗಳ ಅವಧಿಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲೀಕರಣಕ್ಕಾಗಿ ರೂ. 4.444 ಕೋಟಿ ಮೀಸಲು.

★ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಕುರಿತು ಸಮೀಕ್ಷೆ ಸರಾಸರಿ ಶೇ. 93 ಯೋಜನೆಗಳು ಸುವ್ಯವಸ್ಥಿತ ಕಾರ್ಯಾಚರಣೆಯಲ್ಲಿರುವುದು ದೃಢೀಕರಣ.

★ ರಾಜ್ಯಾದ್ಯಂತ ಕುಡಿಯುವ ನೀರಿನ ಮೂಲಗಳ ಗುಣಮಟ್ಟ ಪರೀಕ್ಷೆ ಕಾರ್ಯಕ್ರಮ ಜಾರಿ. ಈ ವರ್ಷ 2 ಲಕ್ಷ ಮೂಲಗಳ ಸಮೀಕ್ಷೆಯ ಗುರಿ. ಈಗಾಗಲೇ 74.000 ಮೂಲಗಳ ಗುಣಮಟ್ಟ ಪರೀಕ್ಷೆ ಸಂಪೂರ್ಣ.

★ ರಾಜ್ಯದ 192 ಸಮಸ್ಯಾತ್ಮಕ (ಅಧಿಕ ಫ್ಲೋರೈಡ್ : ಅಧಿಕ ಲವಣಾಂಶ ಇತ್ಯಾದಿ ಕಾರಣಗಳಿಂದ ಕಲುಷಿತಗೊಂಡಿರುವ) ಗ್ರಾಮೀಣ ಜನವಸತಿಗಳಿಗೆ ಸುರಕ್ಷಿತ ಕುಡಿಯುವ ನೀರಿನ ಸರಬರಾಜಿಗಾಗಿ 'ಸಬ್‌ಮಿಷನ್' ವಿಶೇಷ ಕಾರ್ಯಕ್ರಮ ಜಾರಿ.

ನೀರು ಅಮೂಲ್ಯ - ಅಗತ್ಯಕ್ಕೆ ತಕ್ಕಂತೆ ಬಳಸಿ, ಪೋಲಾಗದಂತೆ ಉಳಿಸಿ
ನಿರ್ಮಲ ಪರಿಸರವೇ ನಿರ್ಮಲ ಮನಸ್ಸಿಗೆ ಮೂಲ
ಸಾಧಿಸಿದ್ದು ಬಹಳಷ್ಟು, ಸಾಧಿಸಬೇಕಾಗಿರುವುದು ಇನ್ನೂ ಬಹಳಷ್ಟು.

- ಕರ್ನಾಟಕ ವಾರ್ತೆ

ಸಮಕಾಲೀನ ಭಾರತದಲ್ಲಿ ವರದಕ್ಷಿಣೆ

-ಡಾ ರಜನಿ ಪಲರಿವಾಲ್

ಎಪ್ಪತ್ತರ ದಶಕದ ಕೊನೆಯ ಭಾಗ ಮತ್ತು ಎಂಭತ್ತರ ದಶಕದಲ್ಲಿ ವರದಕ್ಷಿಣೆ, ಅದರಲ್ಲೂ ವರದಕ್ಷಿಣೆ ಸಾವುಗಳು ಮಹಿಳಾ ಚಳುವಳಿಯ ಮುಖ್ಯ ಹೋರಾಟದ ವಿಷಯಗಳಾದವು. ಮಹಿಳಾ ಚಳುವಳಿಯು ಈ ಸಂದರ್ಭದಲ್ಲಿ ಸಮಾಜದಲ್ಲಿರುವ ಹೀನಾಯ ಸ್ಥಾನಮಾನವನ್ನು ಮತ್ತು ಅವರ ಮೇಲೆ ನಡೆಯುತ್ತಿರುವ ಹಿಂಸೆಯ ಸ್ವರೂಪವನ್ನು ಮತ್ತು ಕುಟುಂಬದಲ್ಲಿ ಹೆಣ್ಣಿನ ಮೇಲೆ ನಡೆಯುವ ಹಿಂಸೆಯನ್ನು ನಿಯಂತ್ರಿಸಲು ಸರ್ಕಾರದ ಜವಾಬ್ದಾರಿಯನ್ನು ಕುರಿತು ಪ್ರಶ್ನೆಗಳನ್ನೆತ್ತಿದವು. ಗಂಡ ಮತ್ತು ಅತ್ತೆಯ ಮನೆಯವರ ಸ್ವಾರ್ಥ ಮತ್ತು ದುರಾಸೆಯ ಬೇಡಿಕೆಗಳನ್ನು ಈಡೇರಿಸಲಾಗದೆ ಸುಡಿಸಿಕೊಂಡು ಭಸ್ಮವಾಗುವ ಹೆಣ್ಣುಗಳು ಹೋರಾಟದ ಕೇಂದ್ರ ಬಿಂದುಗಳಾದರು. ವರದಕ್ಷಿಣೆಯ ವಿರುದ್ಧ ಹೋರಾಡುವುದೆಂದರೆ ಹೆಂಗಸನ್ನು ಕೂಪದಿಂದ ಮೇಲಕ್ಕೆತ್ತುವುದಷ್ಟೇ ಅಲ್ಲ, ಮಹಿಳಾ ವಿಮೋಚನೆಯೆಡೆಗೆ ಅದೊಂದು ದಿಟ್ಟ ಹೆಜ್ಜೆ ಕೂಡ. ಒಂದು ದಶಕದ ನಂತರ ಒಮ್ಮೆ ಹಿಂದಕ್ಕೆ ತಿರುಗಿ ನೋಡಿದಾಗ ಈ ರೀತಿಯ ಸಾರ್ವಜನಿಕ ಪ್ರತಿಭಟನೆಗಳು ವರದಕ್ಷಿಣೆ ಸಾವು ಮತ್ತು ಕೌಟುಂಬಿಕ ಕ್ರೌರ್ಯದತ್ತ ಮತ್ತೆ ಯೋಚಿಸುವಂತೆ ಮಾಡಿದರೆ, ಬಿಡಿ ಬಿಡಿಯಾದ ವೈಯಕ್ತಿಕ ನಿದರ್ಶನಗಳು ವರದಕ್ಷಿಣೆಯ ವಿರುದ್ಧ ಆಡಳಿತಯಂತ್ರದ ಮೂಲಕ ನ್ಯಾಯ ಪಡೆದುಕೊಂಡ ಘಟನೆಗಳಾಗಿವೆ.

ಮದುವೆಯ ಸಂದರ್ಭದಲ್ಲಿ ಸಂಬಂಧಗಳನ್ನು ಭದ್ರಪಡಿಸಲು ಉಡುಗೊರೆಗಳು, ಹಣ, ವಸ್ತ್ರ ಒಡವೆಗಳನ್ನು ಮಿನಿಮಯ ಮಾಡಿಸಿಕೊಳ್ಳುವುದು ನಮ್ಮ ಸಂಸ್ಕೃತಿಗೆ ಹೊಸದೇನಲ್ಲ. ಇಂದಿಗೂ ಇಪ್ಪತ್ತೊಂದನೇ ಶತಮಾನದಲ್ಲೂ ಈ ಸಂಪ್ರದಾಯ ನಡೆದುಕೊಂಡೇ ಬಂದಿದೆ. ಕಳೆದ ಶತಮಾನದಲ್ಲಿ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಸಮಾಜ ಸುಧಾರಕರ ಮತ್ತು ಮಹಿಳಾ ಹೋರಾಟಗಾರರ ಒತ್ತಾಯಕ್ಕೆ ಮಣಿದು ಸರ್ಕಾರವು ಒಂದು ಅನುಪಯುಕ್ತ ಮಸೂದೆಯನ್ನು ಮಂಡಿಸಿತು.

ಈ ಎಲ್ಲ ಕಾನೂನು ಮತ್ತು ಎಪ್ಪತ್ತರ ದಶಕದ ಚಳುವಳಿಯಿದ್ದಾಗ್ಯೂ, ವರದಕ್ಷಿಣೆಯ ಪದ್ಧತಿಯು ನಿರ್ವಾಹತವಾಗಿ ಬೆಳೆದುಕೊಂಡೇ ಬಂದಿವೆ. ಆದರೂ ಭಾರತದಲ್ಲಿ ಇಂದು ಕಾಣಿಸುತ್ತಿರುವ ವರದಕ್ಷಿಣೆ ಪದ್ಧತಿ ಹಿಂದಿನ ಕಾಲದಲ್ಲಿ ಹಾಗೂ ಶಾಸ್ತ್ರಕಾಲದಲ್ಲಿ ಇದ್ದಂತೆಯೂ ಇಲ್ಲ. ಒಟ್ಟಿನಲ್ಲಿ ವರದಕ್ಷಿಣೆ ಪದ್ಧತಿಯು ಲಿಂಗ, ವರ್ಗ ಮತ್ತು ಜಾತೀಯ ಶೋಷಣೆಗಳೆಲ್ಲವನ್ನೂ ಒಳಗೊಂಡಂತೆ ಅಸಮಾನತೆಯ ಲಕ್ಷಣಗಳನ್ನು ಹೊಂದಿದೆ.

ಸಾಂಪ್ರದಾಯಿಕವಾಗಿ ವರದಕ್ಷಿಣೆ, ಜಾತಿ ಮತ್ತು ಸಮಾಜದ ಮೇಲು ಶ್ರೇಣಿಯಲ್ಲಿ ಚಲಿಸುವಿಕೆ - ಇವೆಲ್ಲವೂ ರಚನೆಯಲ್ಲಿ ಮತ್ತು ಅನುಭವದಲ್ಲಿ ಒಂದನ್ನೊಂದು ಹೊಂದಿರುತ್ತವೆ. ಸಾಮಾನ್ಯವಾಗಿ ಬ್ರಾಹ್ಮಣಜಾತಿಯ ಮದುವೆಗಳಲ್ಲಿ ವಧುವನ್ನು ಕರೆದುಕೊಳ್ಳುವ ವರನ ಮನೆಯವರು ಜಾತಿ ಮತ್ತು ಅಂತಸ್ತುಗಳೆರಡರ ದೃಷ್ಟಿಯಿಂದಲೂ ಮೇಲ್ ಹಂತದಲ್ಲಿ ಇರಲು ಬಯಸುತ್ತಾರೆ. ಇದು ಜಾತಿಯ ದೃಷ್ಟಿಯಿಂದ ಮತ್ತು ಆಚರಣೆಯ ದೃಷ್ಟಿಯಿಂದ ಮೇಲರಿಮೆಯನ್ನು ಬೆಳೆಸುವಂತಹುದು. ಇಂತಹ ಸಂದರ್ಭದಲ್ಲಿ ವರದಕ್ಷಿಣೆ ಎನ್ನುವುದು ಒಂದು ರೀತಿಯ incentive. ಸಾರ್ವಜನಿಕವಾಗಿ ಜಾತಿ ಮತ್ತು ಕುಲ ಸಂಬಂಧಗಳನ್ನು ಭದ್ರಪಡಿಸುವ ಕ್ರಮವೂ ಹೌದು. ಮಗಳನ್ನು ದೊಡ್ಡ ಮನೆತನಕ್ಕೆ ಮದುವೆ ಮಾಡಿಕೊಡುವುದರಿಂದ ವಧುವಿನ ಮನೆಯ ಅಂತಸ್ತು ಮೇಲಕ್ಕೇರುತ್ತದೆ. ಆದರೆ ಬ್ರಾಹ್ಮಣೇತರರಲ್ಲಿ ಈ ಪದ್ಧತಿ ಅಷ್ಟೊಂದು ವ್ಯಾಪಕವಾಗಿ ಇರಲಿಲ್ಲ.

ವಸಾಹತುಶಾಹಿಯ ಸಂದರ್ಭದಲ್ಲಿ ಮಾರುಕಟ್ಟೆಯ ಸಂಸ್ಕೃತಿಯ ಮೌಲ್ಯಗಳ ಒತ್ತಡದಿಂದ ಮತ್ತು ಬಂಡವಾಳಶಾಹಿ ಮೌಲ್ಯಗಳ ಪ್ರಸಾರದಿಂದ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳು ಎದ್ದು ಕಾಣುವಷ್ಟು ಢಾಳಾಗಿ ಗೋಚರಿಸಿದವು. ನಗರ ಸಂಸ್ಕೃತಿಯಲ್ಲಿ ಹೆಚ್ಚಿದ ಔದ್ಯೋಗೀಕರಣ ಮತ್ತು ವಿದ್ಯಾವಂತರ ಸಂಖ್ಯೆಯಿಂದ ಸರ್ಕಾರದ ಸಬ್ಸಿಡಿಗಳು ಮುಂತಾದ ಸೌಲಭ್ಯದಿಂದ ನಗರ ಮತ್ತು ಪಟ್ಟಣಗಳ ಅಂತರ ಹೆಚ್ಚಾಯಿತು. ಸರ್ಕಾರವು ದೊಡ್ಡ ದೊಡ್ಡ ಜಮೀನುದಾರರ ಮತ್ತು ಆಸ್ತಿವಂತರ ಅಧಿಕಾರದ ರಚನೆಗಳನ್ನು ಮುಟ್ಟದೆ ತಮ್ಮ ರಾಜಕೀಯ ಸ್ವಹಿತಕ್ಕಾಗಿ ಪೋಷಿಸಿಕೊಂಡು ಬಂದರು. ಎಪ್ಪತ್ತು, ಎಂಭತ್ತರಲ್ಲಿ ನಡೆದ ವರದಕ್ಷಿಣೆ ವಿರೋಧಿ ಚಳುವಳಿಯ ನಂತರ ತೊಂಭತ್ತರ ದಶಕದಲ್ಲಿ ಜಾರಿಗೆ ಬಂದ ಉದಾರೀಕರಣ ನೀತಿಯಿಂದಾಗಿ

ಮಾರುಕಟ್ಟೆ ಸಂಸ್ಕೃತಿಯೇ ಇಡೀ ಸಮಾಜವನ್ನು ನಿಯಂತ್ರಿಸುವ ಏಕೈಕ ಅಸ್ತ್ರವಾಯಿತು. ಮಧ್ಯವರ್ಗದ ಆಶೋತ್ತರಗಳು ಹೆಚ್ಚಾದವಷ್ಟೇ ಅಲ್ಲದೆ ಅವು ಹೊಸ ಹೊಸ ಸ್ವರೂಪವನ್ನು ಪಡೆದವು.

ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಲೆಕ್ಕಕ್ಕೆ ಸಿಗದೆ ವ್ಯಾಪಕವಾಗಿ ಬಳಕೆಯಾಗುತ್ತಿರುವ ಹಣಕಾಸಿನ ತಂತ್ರಗಳು ಅಧಿಕಾರದ ನೆಲೆಯಲ್ಲಿ ಭ್ರಷ್ಟಾಚಾರವನ್ನು ಹೆಚ್ಚಿಸಿದರೆ, ಬಳಕೆಗೆ ಸಿಗಬಲ್ಲ ಹಣಕಾಸಿನ ಹೆಚ್ಚಳವೂ ವ್ಯಾಪಕವಾಗಿ ಎಲ್ಲೆಲ್ಲೂ ಹಬ್ಬಿತು. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಣವನ್ನು ಮನೆಯೊಳಗೆ ಬಚ್ಚಿಟ್ಟರೆ ವ್ಯರ್ಥವೆಂದು ಬಗೆದ ಸಿರಿವಂತವರ್ಗ ಅದನ್ನು ಆಮೋದ ಪ್ರಮೋದಗಳಿಗೆ ಬಳಸಲು ಪ್ರಾರಂಭಿಸಿತು. ಉದಾರನೀತಿಯ ಹೊಸ ಧರ್ಮವು ಬದುಕುವ ಹೊಸ ಬಗೆಯನ್ನು ತಿಳಿಸಿಕೊಟ್ಟಿತು. ಹಣವನ್ನು ದೋಚುವ, ಕಬಳಿಸುವವನೇ ಸಮಾಜದಲ್ಲಿ ಜಾಣ, ಗೌರವಾನ್ವಿತನೆನಿಸಿಕೊಂಡ.

ಈ ರೀತಿ ಹೊಸ ಆರ್ಥಿಕ ನೀತಿಯು ಅದ್ದೂರಿಯ ಮದುವೆ ಮತ್ತು ಅಂತಸ್ಥಿಗೆ ತಕ್ಕಂತೆ ಉಡುಗೊರೆಗಳ ವಿನಿಮಯಕ್ಕೆ ನಾಂದಿ ಹಾಡಿತು. ಸಮಾಜದ ಸ್ಥಾನ ಮಾನದ ಪ್ರದರ್ಶನಕ್ಕೆ, ಕುಲಗೌರವಕ್ಕೆ ಇಂತಹ ವೈಭವದ ಮದುವೆಗಳು, ಅದ್ದೂರಿ ಉಡುಗೊರೆಗಳು ಅಗತ್ಯವಸ್ತುಗಳಾದವು.

ವರದಕ್ಷಿಣೆಯ ಆಚರಣೆಯು ಜೊತೆ ಜೊತೆಗೆ ಪ್ರಾಮುಖ್ಯತೆಯನ್ನು ಪಡೆದುದಷ್ಟೇ ಅಲ್ಲ, ವಿವಾಹಕ್ಕೆ ಆಹ್ವಾನಿಸುವವರ ಸಂಖ್ಯೆ, ವೃತ್ತಗಳು ವಿಸ್ತಾರವಾದವು. ಆರಂಭದಲ್ಲಿ ಉತ್ತರ ಭಾರತದಲ್ಲಿ ವ್ಯಾಪಕವಾಗಿದ್ದ ವರದಕ್ಷಿಣೆ ಪದ್ಧತಿಯು ನಂತರ ದಕ್ಷಿಣಕ್ಕೂ ತನ್ನ ಹರಹನ್ನು ವ್ಯಾಪಿಸಿತು. ಒಟ್ಟಿನಲ್ಲಿ ವರದಕ್ಷಿಣೆಯ ಮೂಲಕ ತಮ್ಮ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ನಡೆಯಿತು. ಒಟ್ಟಿನಲ್ಲಿ ವರದಕ್ಷಿಣೆ ಪದ್ಧತಿಯ ಹಿಂದೆ ಆರ್ಥಿಕ ಅಂಶಗಳ ಒತ್ತಡವನ್ನೇ ನಾವು ಪ್ರಮುಖವಾಗಿ ಕಾಣಬಹುದಾಗಿದೆ.

ವರದಕ್ಷಿಣಕೆ ಪದ್ಧತಿಯು ಎಲ್ಲೆಲ್ಲೂ ವ್ಯಾಪಿಸುತ್ತಿದ್ದಂತೆ ಅದಕ್ಕೆ ಕೆಲವು ದಾಕ್ಷಿಣ್ಯದ ಲಕ್ಷಣಗಳು ಜೊತೆಗೂಡಿ ಬಂದವು. ನಮ್ಮ ಬಹಳಷ್ಟು ಕುಟುಂಬಗಳಲ್ಲಿ ತಂದೆ ತಾಯಿಗಳ ಸಾಮಾಜಿಕ ಜವಾಬ್ದಾರಿಯೆಂದರೆ ಆದಷ್ಟು ಚೆನ್ನಾಗಿರುವ (ಸಂಪದ್ಭರಿತವಾಗಿರುವ) ಮನೆಗಳಿಗೆ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡುವುದು. ಮದುವೆಯಾಗದೆ ಉಳಿಯುವ ಹೆಣ್ಣು ಮಕ್ಕಳು ತಂದೆ ತಾಯಿಗಳಿಗೆ ಮದುವೆಮಾಡಲಾಗದ ಅಸಹಾಯಕತೆಯ ಪ್ರತೀಕಗಳಾಗಿ ಕಾಣಿಸುತ್ತಾರೆ. ವರದಕ್ಷಿಣೆಯ ಸಮಸ್ಯೆಯಿಂದಾಗಿ ಮದುವೆಯಾಗದೆ ಉಳಿದ ಹೆಣ್ಣುಮಕ್ಕಳನ್ನು ಕನಿಕರದಿಂದ ನೋಡುವುದು. ಅವರು ಕೂಡ ಆತ್ಮವಿಶ್ವಾಸ ಕಳೆದುಕೊಂಡು ಸಮಾಜದ ಅಂಚಿಗೆ ಒತ್ತರಿಸಲ್ಪಟ್ಟಂತೆ ಜೀವನ ಸಾಗಿಸುವುದು ಸರ್ವೇ ಸಾಮಾನ್ಯ. ವರದಕ್ಷಿಣೆ ಕೊಡಲಾಗದ ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳನ್ನು ವರದಕ್ಷಿಣೆ ಕೇಳದ ವಯಸ್ಸಾದ, ಇಲ್ಲವೆ ಅಂಗವಿಕಲನಾದ ಮತ್ತು ಎರಡನೆಯ, ಮೂರನೆಯ ಸಂಬಂಧಕ್ಕೆ ಮದುವೆ ಮಾಡಿಕೊಡುವುದು ಅನಿವಾರ್ಯವಾಗುತ್ತದೆ.

ವರದಕ್ಷಿಣೆ ಪದ್ಧತಿಯನ್ನು ಕೆಲವೊಮ್ಮೆ ಸಮರ್ಥಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತವೆ. ವರದಕ್ಷಿಣೆಯನ್ನು 'ಸ್ತ್ರೀಧನ'ವೆಂದು ಭಾವಿಸುವುದು ಮತ್ತು ಆಸ್ತಿಯ ಹಕ್ಕು ಇಲ್ಲದಂತಹ ಸಮಾಜದಲ್ಲಿ ತಂದೆ ತಾಯಿಯರ ಮನೆಯಲ್ಲಿ ಅನುಭವಿಸಿದ್ದ ಸೌಕರ್ಯಗಳನ್ನು ಅತ್ತೆಯ ಮನೆಯಲ್ಲೂ ಅನುಭವಿಸಲಿಕ್ಕಾದರೂ ವರದಕ್ಷಿಣೆ ಇರಬೇಕು, ಎಂಬ ವಾದವಿದೆ. ವರದಕ್ಷಿಣೆಯನ್ನು ಪಡೆದುಕೊಂಡ ಮಹಿಳೆಗೆ ಅತ್ತೆಯ ಮನೆಯಲ್ಲಿ ಒಂದು ಸ್ಥಾನವಿರುತ್ತದೆ. ದನಿಯಿರುತ್ತದೆ, ಎಂದು ಭಾವಿಸಲಾಗುತ್ತದೆ.

ಈ ಎಲ್ಲ ಸಂಗತಿಗಳೇನೇ ಇರಲಿ 'ವರದಕ್ಷಿಣೆ'ಯೆಂದರೆ ಹೆಣ್ಣು ಮಕ್ಕಳನ್ನು 'ಹೊರೆ'ಯೆಂದು ಭಾವಿಸುವ ಮನೋವೃತ್ತಿಯೂ ಜೊತೆಗೆ ಅಂಟಿಕೊಂಡಿರುತ್ತದೆ. ಇದರ ನೇರ ಪರಿಣಾಮವೆಂದರೆ ಹೆಣ್ಣು ಶಿಶುವೇ ಜನಿಸದಂತೆ ಮಾಡುವುದು. ಭ್ರೂಣದ ಹಂತದಲ್ಲಿಯೇ ಹೆಣ್ಣಿನ ಸಂಖ್ಯೆಯನ್ನು ಇಲ್ಲವಾಗಿಸುವುದು ಆದ್ದರಿಂದ ಹೆಣ್ಣು ಭ್ರೂಣ ಹತ್ಯೆಯ ವಿರುದ್ಧದ ಹೋರಾಟವೆಂದರೆ ಅದು ವರದಕ್ಷಿಣೆಯ ವಿರುದ್ಧದ ಹೋರಾಟವೂ ಆಗುತ್ತದೆ.

ಆದರೆ ಇಂದು ಕಲಿತ, ವಿದ್ಯಾವಂತ ಹುಡುಗಿಯರು ಈ ದುಷ್ಟ ಪದ್ಧತಿಯ ಅನಿವಾರ್ಯತೆಯನ್ನು ಪ್ರಶ್ನೆ ಮಾಡುತ್ತಿದ್ದಾರೆ. ಹೆಣ್ಣನ್ನು ಕೀಳಾಗಿ ಕಾಣುವ ಎಲ್ಲ ಸಂಪ್ರದಾಯದ ವಿಧಿಗಳನ್ನು ಪ್ರತಿಭಟಿಸುತ್ತಿದ್ದಾರೆ. ಈಎಲ್ಲ ನೋವು, ರೋಷ ಮತ್ತು ಪ್ರತಿಭಟನೆಯ ಕಾವನ್ನು ಮಹಿಳಾ ಚಳುವಳಿ ಅಲಕ್ಷಿಸದೆ ಸರಿಯಾದ ದಿಕ್ಕಿನಲ್ಲಿ ಹರಿಯುವಂತೆ ಮಾಡಬೇಕು.

ಕೃಪೆ : expanding dimensions of Dowry

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

ಅಖಿಲಭಾರತ ಜನವಾದಿ ಮಹಿಳಾ ಸಂಘಟನೆಯ ವರದಕ್ಷಿಣೆ ವಿರೋಧಿ ಸಮಾವೇಶದಲ್ಲಿ ಕೈಗೊಂಡ ನಿರ್ಣಯಗಳು

★ ಹಣವಂತರ ಮತ್ತು ಪ್ರಭಾವೀಯುತ ವ್ಯಕ್ತಿಗಳ ಆಡಂಬರದ ಪ್ರದರ್ಶನದ ವಿರುದ್ಧ ಸಾರ್ವಜನಿಕ ಪ್ರತಿಭಟನೆ ನಡೆಸಬೇಕು.

★ ವರದಕ್ಷಿಣೆಯಿಲ್ಲದ ಮದುವೆಗಳನ್ನು, ಅಂತರ್ಜಾತೀಯ ವಿವಾಹಗಳನ್ನು, ಸ್ವಂತ ಆಯ್ಕೆಯ ವಿವಾಹಗಳನ್ನು ಪ್ರೋತ್ಸಾಹಿಸಬೇಕು.

★ ಭ್ರೂಣದ ಲಿಂಗ ಪರೀಕ್ಷೆಯ ಕೇಂದ್ರಗಳನ್ನು ಮುಚ್ಚಬೇಕು.

★ ವರದಕ್ಷಿಣೆ, ಗಂಡುಮಗುವಿನ ಆದ್ಯತೆ, ಅದ್ದೂರಿಯ ವಿವಾಹಗಳಿಗೆ ಸಂಬಂಧಪಟ್ಟ ಜಾಹೀರಾತನ್ನು ಪ್ರತಿಭಟಿಸಬೇಕು.

★ ವರದಕ್ಷಿಣೆ ನಿಷೇಧದ ಬಗ್ಗೆ ಸಾಮೂಹಿಕ ಸಂಕಲ್ಪ ತೊಡುವ ಕಾರ್ಯ ಮಾಡಬೇಕು.

★ ಗಂಡು ಮಗುವಿನ ಆದ್ಯತೆಗೆ ಸಂಬಂಧಪಟ್ಟ ಧಾರ್ಮಿಕ ಆಚರಣೆಗಳ ವಿರುದ್ಧ ಹೋರಾಟ ಮಾಡಬೇಕು.

★ ಪಠ್ಯ ಪುಸ್ತಕಗಳಲ್ಲಿ ಗಂಡು ಮಗನ ಆದ್ಯತೆ, ಹೆಣ್ಣನ್ನು ಅವಮಾನಿಸುವ ಆಚರಣೆಗಳ ವಿರುದ್ಧದ ಮೌಲ್ಯವನ್ನು ಪ್ರತಿಪಾದಿಸಬೇಕು.

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri